# ಮಹಿಳಾ ವಿಶೇಷ

## MAHILA VISHESHA


RNI No. KARKAN/2015/71642

ಕನ್ನಡ ತಿಂಗಳ ಪತ್ರಿಕೆ KANNADA MONTHLY ಡಿಸೆಂಬರ್ December 1-31 -2018

| | | | | |
|---|---|---|---|---|
| Vol: 4 | Issue : 4 | 40 | Pages : 16 | Price: Rs.10/- |
| ಸಂಪುಟ: 4 | ಸಂಚಿಕೆ: 4 | | ಪುಟ : 16 | ಬೆಲೆ: ರೂ. 10/– |



ಸಂಪಾದಕರು: ಹೆಚ್.ವಿ. ವೆಂಕಟಸುಬ್ಬರಾವ್ ಮೊಬೈಲ್ 9243584444 / 8880334444





ಒಳ ಪುಟಗಳಲ್ಲಿ....


| | |
|---|---|
| ಪತ್ರಗಳ ಮಾಹಿತಿ– ಬೃಹತೀ (ಹೆಗ್ಗುಳ್ಳ) | 2 |
| ಉತ್ಥಾನ ದ್ವಾದಶಿ ಹಬ್ಬ | 4 |
| ಕ್ರಿಸ್ಮಸ್ ಯಾವ ದಿನ | 6 |
| ಸಾಲ ತೀರಿಸುವುದು ಹೇಗೆ | 8 |
| ಆರೋಗ್ಯದ ಕೀಲಿಕೈ ನಾಲಿಗೆ | 10 |
| ಕುರೂಪದಲ್ಲೂ ಸೌಂದರ್ಯ ಸ್ಪರ್ಧೆ | 12 |
| ಚಳಿಯಲ್ಲಿ ಒಂದು ಬೆಚ್ಚಗಿನ ಗುನುಗು | 14 |





ಕಡೇ ಕಾರ್ತಿಕ ಸೋಮವಾರ, ಶ್ರೀ ದತ್ತಾತ್ರೇಯ ಜಯಂತಿ, ತಿಂತ್ರಿಣೀಗೌರಿ ವ್ರತ, ಧನುರ್ಮಾಸ ಪೂಜಾರಂಭ, ಗೀತಾ ಜಯಂತಿ, ಕ್ರಿಸ್‌ಮಸ್ ದಿನಾಚರಣೆ ಹಾಗೂ ಶ್ರೀ ಶಾರದಾದೇವಿ ಜಯಂತಿ ಪ್ರಯುಕ್ತ ಎಲ್ಲಾ ಓದುಗರಿಗೂ ಶುಭಾಶಯಗಳು

## 21 ಪತ್ರೆಗಳ ಮಾಹಿತಿ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧಿಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯ ಪದ್ದತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ–ಪುರಾಣ–ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

### 17. ಬೃಹತೀ (ಹೆಗ್ಗುಳ್ಳ)

ಸಂಸ್ಕೃತ: ಮಹತೀ, ಸಿಂಬೀ, ಕ್ಷುದ್ರ, ವಾರ್ತಾಕಿ
ಹಿಂದಿ: ಬಾರಹಂತ, ಬಡೀಕಟೇರಿ
ತಮಿಳು: ತೆಲ್ಲ ಮೂಲಕಂ
ತೆಲುಗು: ಪೆದ್ದಮೂಲಕಮು
ಇಂಗ್ಲಿಷ್: ಇಂಡಿಯನ್ ನೈಟ್ ಶೇಡ್
ವೈಜ್ಞಾನಿಕ ಹೆಸರು: Solanum Indicum

ಈ ಗಿಡ ಭಾರತದೆಲ್ಲೆಡೆಗಳಲ್ಲೂ ಬೆಳೆಯುತ್ತದೆ. ಬದನೆಯ ಜಾತಿಗೆ ಸೇರಿದ ಹೆಗ್ಗುಳ್ಳವೂ ಆಯುರ್ವೇದ ಔಷಧಿಗಳಲ್ಲಿ ಬಳಸುವ 'ದಶಮೂಲ'ಗಳಲ್ಲಿ ಒಂದು. ಇದು ಮುಳ್ಳುಗಳಿಂದ ಕೂಡಿದ ಗಿಡ. ಇದರ ಕಾಂಡಗಳು ನಕ್ಷತ್ರಾಕಾರದಲ್ಲಿರುತ್ತವೆ. ಇದಕ್ಕೆ ನೀಲಿಬಣ್ಣದ ಹೂಗಳಿದ್ದು, ಹಣ್ಣುಗಳು ಹಳದಿ ಬಣ್ಣದಿಂದ ಕೂಡಿರುತ್ತವೆ.



ಸಾಂಖ್ಯರ 'ಗೃಹ್ಯಸೂತ್ರ'ದಲ್ಲಿ ಹೆಗ್ಗುಳ್ಳವನ್ನು ಅರೆದು ಸೂತಿಕಾಗಾರ (ಹೆರಿಗೆ ಕೋಣೆ)ದ ಒಳಗೋಡೆಗಳಿಗೆ ಲೇಪಿಸುತ್ತಿದ್ದರೆಂಬ ಉಲ್ಲೇಖವಿದೆ. 'ಕೌಶಿಕಸೂತ್ರ'ದಲ್ಲಿ ಇದನ್ನು ಪುಂಸವನ ಕರ್ಮದಲ್ಲಿ ಉಪಯೋಗಿಸುತ್ತಿದ್ದರೆಂಬ ವಿವರವಿದೆ. ಅಥರ್ವ ವೇದ ಮತ್ತು ಸಮವಿಧಾನ ಬ್ರಾಹ್ಮಣದಲ್ಲಿಯೂ ಬಿಳಿ ಹೂವಿನ ಹೆಗ್ಗುಳ್ಳವನ್ನು ಉಲ್ಲೇಖಿಸಲಾಗಿದೆ. 'ಕೈಯದೇವ ನಿಘಂಟು'ವಿನಲ್ಲಿ 11 ವಿಧದ ಬೃಹತಿಯ ಬಗೆಗೆ ತಿಳಿಸಲಾಗಿದೆ.

**ಉಪಯುಕ್ತ ಭಾಗಗಳು: ಬೇರು ಮತ್ತು ಹಣ್ಣು.**

ರಾಸಾಯನಿಕ ಘಟಕಗಳು: ಸೊಲಾನಿನ್, ಕೆರೋಟಿನ್, ಕಾರ್ಪೆಸ್ಟೊರಾಲ್, ಸೊಲಾನೋ ಕಾರ್ಪೋನ್, ಡೈಸೋಜೆನಿನ್, ಬೀಟಾ–ಸಿಟೋಸ್ಪಿ ರಾಲ್, ಸೊಲಾಸೊನಿನ್.

**ಔಷಧೀಯ ಗುಣಗಳು**

- ಹೊಟ್ಟೆನೋವು ಇದ್ದರೆ ಹೆಗ್ಗುಳ್ಳದ ಬೇರನ್ನು ಪುಡಿ ಮಾಡಿ, ಮಜ್ಜಿಗೆಯಲ್ಲಿ ಬೆರೆಸಿ ಕುಡಿಯಬೇಕು.
- ತಲೆ ಯಲ್ಲಿ ದುಂಡನೆ ನಾಣ್ಯದಾಕಾರದಲ್ಲಿ ಕೂದಲು ಉದುರುತ್ತಿದ್ದಲ್ಲಿ ಹೆಗ್ಗುಳ್ಳದ ಹಣ್ಣನ್ನು ನೀರಿನಲ್ಲಿ ಅರೆದು ಲೇಪಿಸಬೇಕು. ಆ ಜಾಗದಲ್ಲಿ ತಾಜಾ ಹಣ್ಣನ್ನು ಉಜ್ಜಿ ಉಜ್ಜಬೇಕು.
- ಹೃದ್ರೋಗಗಳಿಂದ ಬಳಲುವವರು ಹೆಗ್ಗುಳ್ಳದ ಬೇರಿನ ಪುಡಿಯನ್ನು ಸೇವಿಸಬೇಕು.
- ಇದು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ.
- ಚರ್ಮರೋಗಗಳಲ್ಲಿ ಹೆಗ್ಗುಳ್ಳವನ್ನು ಅರೆದು ಲೇಪಿಸಿದರೆ ನವೆ ಕಡಿಮೆಯಾಗುತ್ತದೆ.
- ವಾಂತಿ, ಜಂತುಹುಳು ಮತ್ತು ಹರ್ಪಿಸ್ ಗಳಲ್ಲಿಯೂ ಬೃಹತೀ ಉಪಯುಕ್ತ.
- ಮೈಕೈ ನೋವು, ಬಿಕ್ಕಳಿಕೆ, ಸ್ವರ ಒಡೆದಿದ್ದಲ್ಲಿ ಹೆಗ್ಗುಳ್ಳ ಬಳಸಬೇಕು.
- ಗಾಯ ಮತ್ತು ಹುಣ್ಣುಗಳಾಗಿದ್ದಲ್ಲಿ ಅವುಗಳನ್ನು ಹೆಗ್ಗುಳ್ಳದ ಕಷಾಯದಿಂದ ತೊಳೆಯಬೇಕು. ಜೊತೆಗೆ ಹೆಗ್ಗುಳ್ಳವನ್ನು ಎಳ್ಳೆಣ್ಣೆಯಲ್ಲಿ ಬೆರೆಸಿ, ತೈಲ ತಯಾರಿಸಿ ಲೇಪಿಸಿಕೊಳ್ಳಬೇಕು.
- ಹೆಗ್ಗುಳ್ಳದ ಹೂಗಳಿಂದ ತಯಾರಿಸಿದ ಅಂಜನವನ್ನು ಕಣ್ಣಿಗೆ ಲೇಪಿಸಿಕೊಂಡಲ್ಲಿ ಕಣ್ಣಿನ ಕಾಯಿಲೆಗಳು ವಾಸಿಯಾಗುತ್ತವೆ.
- ಪದೇ ಪದೇ ಗರ್ಭಪಾತವಾಗುತ್ತಿದ್ದಲ್ಲಿ ಗರ್ಭ ಧರಿಸಿದ ಆರಂಭದಿಂದಲೇ ಹೆಗ್ಗುಳ್ಳದ ಸೇವನೆ ಉಪಯುಕ್ತ. ಇದು ಗರ್ಭದ ಬೆಳವಣಿಗೆಗೆ ಸಹಕಾರಿಯಾಗುವುದಲ್ಲದೆ ಆರೋಗ್ಯಕರ ಮಗುವಿನ ಜನನಕ್ಕೂ ಅನುಕೂಲಕಾರಿ.

**–ಸುಬ್ರಹ್ಮಣ್ಯ ಶರ್ಮ**

## ನನ್ನ ಮಾತು





## ನ್ಯಾಯ, ನೀತಿ, ಶಾಂತಿ, ನೆಮ್ಮದಿ ಎಲ್ಲಿ?

**Great line by Vivekananda**
**I am not "HANDSOME", But**
**I can give My**
**"HAND" to "SOME" One**
**Who need help**

ಒಳ್ಳೆಯ ಹೆಸರು, ಕೀರ್ತಿ, ಗುಣ, ಸಾಚಾತನ ನನ್ನ ಬಿಟ್ಟು ಬೇರೆಯವರೊಡನೆ ಹೋಗಬಾರದು, ಎಲ್ಲವೂ ನಾನೇ ಹೇಳಿದಂತೆ ಆಗಬೇಕು ಇತ್ಯಾದಿಗಳು ಮಾನವನ ಆಸೆ ಆಕಾಂಕ್ಷೆಗಳಿರುವುದು ಸಹಜ. ಆದರೆ ಇವೆಲ್ಲವನ್ನೂ ಉಳಿಸಿಕೊಳ್ಳುವುದು ಯಾರ ಕೈಲಿದೆ ಹೇಳಿ? ಇವೆಲ್ಲವನ್ನೂ ಉಳಿಸಿಕೊಳ್ಳಲು ನಿಮ್ಮ ಕೈ ಹಾಗೂ ಬಾಯಲ್ಲೇ ಇರುವುದು.

ಆಡುವೊಂದು ಮಾಡುವುದೊಂದು ಆಗಬಾರದು. ಈಗ ದಿನನಿತ್ಯ ಹೇಳಿದ್ದನ್ನು ಹೇಳೇ ಇಲ್ಲ. ಹಾಗೆ ಮಾತನಾಡಲೇ ಇಲ್ಲ, ನಾ ಮಾತಾಡಿದ್ದು ಹೀಗೆ ಅಂತ ಸಮರ್ಥಿಸಿ ಕೊಳ್ಳುವುದು ಆಗಿಬಿಟ್ಟಿದೆ. ತಪ್ಪನ್ನು ಒಪ್ಪಿಕೊಳ್ಳಲು ಯಾರೂ ಸಿದ್ಧರಿಲ್ಲ. ಆದರೆ ಮಾಡಿದ ತಪ್ಪನ್ನೇ ವಾದಿಸುವ ಜಾಯಮಾನವಾಗಿ ಹೋಗಿದೆ. ಏನೇ ಆದರೂ ಅವರಿಗೆ ಸರಿ ಅನಿಸಿದ್ದು ಮಾತ್ರವೇ ಸರಿ. ಬೇರೆಯವರಿಗೆ ಏನಾದರೂ ಪರವಾಗಿಲ್ಲ ಎಂಬುದು ಎಲ್ಲಾ ರಂಗಗಳಲ್ಲೂ ಎದ್ದು ಕಾಣುತ್ತಿದೆ.

ಜನಸಾಮಾನ್ಯರು ಮಾತನಾಡುತ್ತಿರುವುದೇನೆಂದರೆ ಕಳೆದ 35–40 ವರ್ಷಗಳ ಹಿಂದೆ ಕಾಫಿ ಕುಡಿಯಲು ನಮ್ಮ ಹತ್ತಿರ ಬರುತ್ತಿದ್ದವರು ಈಗ ಕೋಟ್ಯಾಧಿಪತಿಗಳಾಗಿರುವುದು ಹೇಗೆ ಎಂಬುದು ಯಕ್ಷಪ್ರಶ್ನೆಯಾಗಿದೆ. ಎಷ್ಟು ದುಡಿದರೂ ಜೀವನ ಸಾಗಿಸುವುದೇ ಕಷ್ಟವಿರುವಾಗ ನಾವುಗಳು ನೋಡುತ್ತಾ ನೋಡುತ್ತಾ ಹೇಗೆ ಅವರುಗಳು ಶ್ರೀಮಂತರಾದರು ಎಂಬುದು ಕಾಣುತ್ತಿದೆ.

ಏನೇ ಆಗಲಿ, ಜನಸಾಮಾನ್ಯನಿಗೆ ಬೇಕಾಗಿರುವುದು ಶಾಂತಿ, ನೆಮ್ಮದಿ, ಆರೋಗ್ಯ, ಸಂಪಾದನೆ ಮಾತ್ರ. 2018 ಮುಗಿಯಲಿದ್ದು, ಹೊಸ ವರ್ಷ 2019ರಲ್ಲಾದರೂ ಸರ್ಕಾರ ನಾಡಿನ ಜನತೆಗೆ ಶಾಂತಿ, ನೆಮ್ಮದಿ ನೀಡಲಿ ಎಂಬುದೇ ಜನಸಾಮಾನ್ಯರ ಮಾತಾಗಿದೆ.

ಸಂಪಾದಕ
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ


# ಮಹಿಳಾ ವಿಶೇಷ

**ಕನ್ನಡ ತಿಂಗಳ ಪತ್ರಿಕೆ**

**ಡಿಸೆಂಬರ್ 1 ರಿಂದ 31–2018**

**ಸಂಪುಟ 4, ಸಂಚಿಕೆ 4,**

**ಪುಟ 16 ಬೆಲೆ ರೂ.: 10**

**MAHILA VISHESHA**

**KANNADA MONTHLY**

**December 1 to 31 -2018**

Vol : 4 **Issue : 4 Pages : 16**

**Price : Rs.10/-**

ಮುಖಪುಟ :

ಶ್ರೀ ಕಬ್ಬಾಳಮ್ಮ ದೇವಸ್ಥಾನ, ಕನಕಪುರ



ಗೌರವ ಸಂಪಾದಕರು :

ಶ್ರೀಮತಿ ಸತ್ಯಭಾಮಾ ದಾಸ್

ಶ್ರೀಮತಿ ಗೀತಾ ರಾವ್

ಸಂಪಾದಕರು :

ಹೆಚ್.ವಿ.ವೆಂಕಟಸುಬ್ಬರಾವ್

ಮೊಬೈಲ್ 9243584444

ಉಪಸಂಪಾದಕರು :

ಎಸ್.ವೆಂಟಕರವಣಪ್ಪ

ಎಂ.ಆರ್. ಜಯಪ್ರಕಾಶ ನಾರಾಯಣ

ಭಾಸ್ಕರ್ ಹೆಚ್.ವಿ.

ಮೂರ್ತಿ ಜಿ.ಎನ್.

ಕಚೇರಿ ವಿಳಾಸ :

**ಮಹಿಳಾ ವಿಶೇಷ**

**ನಂ. 10, ಸಿಟಿ ಬಸ್‌ಸ್ಟ್ಯಾಂಡ್ ಕಟ್ಟಡ,**
**2ನೇ ಮಹಡಿ, ಕೆ.ಆರ್. ಸರ್ಕಲ್,**
**ಮೈಸೂರು – 570001**

**E-mail:**
**mahilavishesha15@gamil.com**
**Web: www.mahilavishesha.in**
**Whatsapp No : 8880334444**

# ಉತ್ಥಾನ ದ್ವಾದಶಿ ಹಬ್ಬ

ಜಪ, ಧ್ಯಾನ, ವಿಚಾರ, ಗಾನ, ಚಿಂತನ, ಅರ್ಚನಾ, ಸುತಿ ಇತ್ಯಾದಿ ಯಾವುದೇ ಬಗೆಯ ಮೂಲಕ ಭಗವಂತನ ದರ್ಶನ ಸಾಧ್ಯ.



ಕಾರ್ತಿಕ ಶುದ್ಧ ದ್ವಾದಶಿ ದಿನದಂದು ವಿಷ್ಣುವು ತುಳಸೀದೇವಿಯನ್ನು ವರಿಸಿದ ದಿನವೆಂಬ ಪುರಾಣೋಕ್ತಿಯಂತೆ ತುಳಸೀ ವಿವಾಹ ಅಥವಾ ತುಳಸೀಹಬ್ಬ ಎಂದು ಪ್ರಸಿದ್ಧಿಯಾಗಿದೆ. ತುಳಸಿಯ ದರ್ಶನ ದಿಂದ ಪಾಪಪರಿಹಾರ, ಸ್ಪರ್ಶದಿಂದ ಪವಿತ್ರತೆ. ವಂದನದಿಂದ ರೋಗಪರಿ ಹಾರ, ಪ್ರೋಕ್ಷಿಸಿಕೊಂಡರೆ ಆಯು ವೃದ್ಧಿ. ಸಸಿ ನೆಡುವುದರಿಂದ ಶ್ರೀಕೃಷ್ಣನ ಸಾನ್ನಿಧ್ಯ ಲಾಭ, ಅರ್ಚಿಸಿದರೆ ಮೋಕ್ಷಪ್ರಾಪ್ತಿಯೆಂದು ಸನಾತನರ ಅಭಿಪ್ರಾಯ. ಈ ದಿನ ಸಂಜೆ ಬೃಂದಾವನದಲ್ಲಿ ತುಳಸಿ ಗಿಡದ ಜೊತೆಗೆ ನೆಲ್ಲಿಕಾಯಿ ಗಿಡದ ರೆಂಬೆಯನ್ನಿಟ್ಟು (ಕಾಯಿಸಮೇತ) ಪೂಜೆ ಮಾಡುವುದು ಸಂಪ್ರದಾಯ. ಇತರ ದೀಪಗಳೊಂದಿಗೆ ನಲ್ಲಿಕಾಯಿಯಲ್ಲೂ ದೀಪ ಹಚ್ಚಿಡುವುದುಂಟು. ಕೃಷ್ಣನ ಪೂಜೆ ಮಾಡಿ, ಅವಲಕ್ಕಿ, ಬಾಳೆಹಣ್ಣುಗಳನ್ನು ಪ್ರಸಾದರೂಪವಾಗಿ ಸುಮಂಗಲಿ ಯರಿಗೆ ತಾಂಬೂಲ ಕೊಡುವುದೂ ಸಂಪ್ರದಾಯ ಕಾರ್ತೀಕ ಮಾಸದಲ್ಲಿ ಮನೆಯ ಸುತ್ತಲೂ ದೀಪದ ಹಣತೆಗಳನ್ನು ಹಚ್ಚಿಡುವುದು ಸಂಪ್ರದಾಯವಾಗಿರು ವುದರಿಂದ ಈ ದಿನದಂದು ವಿಧವಿಧವಾದ ದೀಪಗಳನ್ನು ಹಚ್ಚಿ ಬೃಂದಾವನ, ದೇವರಮನೆ ಹಾಗೂ ಮನೆಯ ಹೊರಗಡೆ ಮನೆಯ. ಸುತ್ತಲೂ ದೀಪಗಳನ್ನು ಬೆಳಗಿಸುವುದು. ವಾಡಿಕೆಯಾಗಿದೆ.

### ಉತ್ಥಾನದ್ವಾದತಿ ಅಥವಾ ತುಳಸೀ ಹಬ್ಬ

**1 ತುಳಸಿ:–** ನಮ್ಮ ಸುತ್ತಾ ಹಸಿರು ಇದ್ದಷ್ಟು ನಮಗೆ ಒಳ್ಳೇ ಆರೋಗ್ಯ ಇರುತ್ತೆ. ಏಕೆಂದರೆ ಗಿಡಗಳು ವಾತಾವರಣದಲ್ಲಿರುವ ಇಂಗಾಲಾಮ್ಲವನ್ನು ತೆಗೆಕೊಂಡು, ಆಮ್ಲಜನಕವನ್ನು ಹೊರಬಿಡುತ್ತವೆ. ಅದಕ್ಕೇ, ಹೆಚ್ಚು ಹೆಚ್ಚು ಗಿಡಮರಗಳಿರುವ ಕಡೆ ನಾವು ಹೋದ್ರೆ ನಮಗೆ ಮನಸ್ಸಿಗೆ ಒಂದು ರೀತಿ ಸಂತೋಷ ಸಿಕ್ಕಿ, ಉಲ್ಲಾಸವಾಗಿರ್ತಿವಿ. ವಾತಾವರಣದಲ್ಲಿ ಸೆಖೆಯೂ ಕಮ್ಮಿಯಾಗಿ ಹಿತಮಿತ ವಾದ ಗಾಳಿಯೂ ಬೀಸುತ್ತದೆ. ಅದರಲ್ಲೂ ಈ ತುಳಸಿ ಗಿಡದಂತಹ ಅನೇಕ ಗಿಡಗಳು ನಮಗೆ ನಾನಾ ರೀತಿಯಲ್ಲಿ ಉಪಯುಕ್ತವಾಗಿವೆ. ಈ ತುಳಸಿ ಗಿಡವನ್ನು ನಾವು ಪೂಜಿಸುವುದಕ್ಕೂ ಅನೇಕ ಕಾರಣಗಳಿವೆ. ಪುರಾಣದಲ್ಲಿ ಇದರ ಬಗ್ಗೆ ಒಂದು ಕತೆ ಇದೆ. ಒಮ್ಮೆ ಅತ್ಯಂತ ಸಂತೋಷ ಗೊಂಡ ವಿಷ್ಣುವಿನ ಕಣ್ಣಿನಿಂದ ಆನಂದಬಾಷ್ಪವು ಹರಿದು ಅದು ಒಂದು ಸಸಿಯಾಗಿ ಪರಿವರ್ತನೆಗೊಂಡಿತು. ಆ ಸಸಿಯೇ ತುಳಸಿ ಸಸಿ. ಎರಡನೆಯದಾಗಿ ಒಬ್ಬ ರಾಕ್ಷಸನಿದ್ದ. ಅವನಿಗೆ ಬೃಂದಾ ಅನ್ನುವ ಹೆಂಡತಿಯಿದ್ದಳು. ಮಹಾಪತಿವ್ರತೆಯಾಗಿದ್ದ ಇವಳು ಒಬ್ಬ ಮಹಾನ್ ಮುನಿಯಿಂದ ಅನುಗ್ರಹಿತಳಾಗಿ ಗಂಡನ 'ದೋಷ ಪರಿಹಾರ್ಥವಾಗಿ ಶ್ರದ್ಧಾ ಭಕ್ತಿಯಿಂದ ದೇವತಾಕಾರ್ಯಗಳನ್ನು ಮಾಡುತ್ತಿದ್ದಳು. ಈ ಪತಿವ್ರತೆಯ ಮಹಿಮೆಯಿಂದ, ದುಷ್ಟನಾದ ಪತಿಯ ಸಂಹಾರ ಕಾರ್ಯ ದೇವತೆಗಳಿಗೆ ಅತ್ಯಂತ ಕಷ್ಟಕರವಾಯಿತು. ಆ ದೇವತೆ ಗಳು ಬೃಂದಾಳಲ್ಲಿಯೇ ಸ್ವಲ್ಪ ಆಲಸ್ಯ ವನ್ನು ಮೂಡಿಸಿ, ಅವಳ ಶ್ರದ್ಧೆಯಲ್ಲಿ ದೋಷವು ಕಾಣಿಸಿಕೊಳ್ಳುವಂತೆ ಮಾಡಿ, ಸಮಯ ಸಾಧಿಸಿ ಅವಳ ಪತಿಯಾದ ರಾಕ್ಷಸನನ್ನು ಸಂಹರಿಸಿದರು. ಆದರೆ ವಿಷ್ಣುವು ಬೃಂದಾಳ ಮಧುರಪ್ರೇಮ, ಪತಿವ್ರತಾ. ಮನೋಭಾವವನ್ನು ಮೆಚ್ಚಿ ಇವಳಿಗೆ ಸದಾಕಾಲ ತನ್ನ ಕೊರಳಿನಲ್ಲಿಯೇ ಇರುವಂತೆ ತುಳಸಿಯಾಗಿ ಪರಿವರ್ತಿಸಿ ಶಾಶ್ವತ ಪದವಿಯನ್ನು ಅನುಗ್ರಹಿಸಿದನು. ಪುರಾಣದಲ್ಲಿ ರುವ ಕತೆಯ ಆಧಾರದ ಮೇಲೆ ಈ ತುಳಸಿಯ ವೈಶಿಷ್ಟ್ಯವನ್ನು ಅನೇಕರು ತಿಳಿ ಹೇಳಿದ್ದಾರೆ. ಸಾಕ್ಷಾತ್ ವಿಷ್ಣುವು ಅತ್ಯಂತ ಧರ್ಮನಿಷ್ಠ ನಾಗಿದ್ದು, ಇಂತಹ ಒಂದು ಸತ್ಕಾರ್ಯದ ಸಮಯದಲ್ಲಿ ಅತ್ಯಂತ ಸಂತೋಷಭರಿತ ನಾದಾಗ ಅವನ ಕಣ್ಣಿನಿಂದ ಆನಂದಬಾಷ್ಪವು ಹರಿಯಲಾರಂಬಿಸಿ, ಆ ಕಣ್ಣೀರು ನೆಲದ ಮೇಲೆ ಬಿದ್ದಾಗ, ಅದು ತುಳಸೀಗಿಡಗಳಾಗಿ ಪರಿವರ್ತಿತವಾದವು. ಅಂದಿನಿಂದ ಲಕ್ಷ್ಮೀ ಸ್ವರೂಪಳಾದ ಈ ತುಳಸಿಯನ್ನು ಮಾಲೆಯಾಗಿ ಸದಾಕಾಲ ವಿಷ್ಣುವು ತನ್ನ ಕೊರಳಲ್ಲಿ ಧರಿಸಿರುತ್ತಾನೆ. ತುಳಸಿ: ನಾವು ಕೂಡ ಯಾವುದೇ ಕಾರ್ಯವನ್ನು ಮಾಡುವುದಿಲ್ಲ.

ಅಷ್ಟೇ ಅಲ್ಲ, ಈ ತುಳಸಿ ದಳದಲ್ಲಿ. ರೋಗನಿವಾರಕ ಗುಣಗಳಿವೆ. ಕೆಮ್ಮು ಮುಂತಾದ ರೋಗಗಳಿಗೆ ಈ ಸಸ್ಯ ದಿವ್ಯೌಷಧಿ. ಮನೆಯ ಮುಂದೆ ತುಳಸೀ ಗಿಡವಿದ್ದರೆ, ಕೇವಲ ಶುಭ ಮಾತ್ರವಲ್ಲಾ, ಭಯನಿವಾರಕವೂ ಹೌದು. ಹಾಗೂ ಇಡೀ ಪರಿಸರದಲ್ಲಿ ಒಳ್ಳೆಯ ಸುವಾಸನೆ, ಶುದ್ಧ ವಾತಾವರಣವಿರುತ್ತದೆ. ಈ ಗಿಡಕ್ಕೆ ನಮಸ್ಕರಿಸುವ ಉದ್ದೇಶವೇನೆಂದರೆ, ಅದರ ಪ್ರದಕ್ಷಿಣೆಯ ಸಮಯದಲ್ಲಿ ನಾವು ಸೇವಿಸುವ ಗಾಳಿಯು ಕಲುಷರಹಿತವಾಗಿದ್ದು, ನಮ್ಮ ಆರೋಗ್ಯ ಕೂಡ ಸುಧಾರಿಸುತ್ತದೆ. ಮನೆಯೊಡತಿ ತುಳಸಿ ಪೂಜೆ ಮಾಡಿ, ಇಡೀ ಕುಟುಂಬಕ್ಕೆ ಮಂಗಳ ವಾಗಲಿ ಎಂದು ಪ್ರಾರ್ಥಿಸುವುದರಿಂದ ಕುಟುಂಬದವ ರೆಲ್ಲರಿಗೂ ಆರೋಗ್ಯ, ಆಯುಸ್ಸು ವೃದ್ಧಿಯಾಗುವುದರಲ್ಲಿ ಸಂದೇಹವೇ ಇಲ್ಲ. ಪರಿಸರ ಮಾಲಿನ್ಯವನ್ನೂ ತಡೆಯುವ ಶಕ್ತಿ ಈ ಗಿಡಕ್ಕೆ ಇದೆ.

ವೃಂದಾ ವೃಂದಾವನೀ ವಿಶ್ವಪೂಜಿತಾ ವಿಶ್ವಪಾವನಿ

ಪುಷ್ಪಸಾರಾ ನಂದಿನೀ ಚ ತುಲಸೀ ಕೃಷ್ಣಜೀವನ

ತುಳಸಿ ನಮ್ಮ ಸಂಸ್ಕೃತಿಯಲ್ಲಿ ಅತ್ಯಂತ ಪವಿತ್ರವೆಂದು ಪರಿಗಣಿಸಲ್ಪಟ್ಟ ಒಂದು ಸಸ್ಯ. ತುಳಸಿ ಇರುವ ವನದಲ್ಲಿ ಯಮಮೂತರೂ ಬರಲಾರರು. ತುಳಸಿ ಎಂದರೆ ಹೋಲಿಸಲಾಗದ್ದು ಎಂದು ಅರ್ಥ. ಕೃಷ್ಣ ತುಳಸಿ, ರಾಮತುಳಸಿ ಎಂಬ ಎರಡು ವಿಧದ ತುಳಸಿ ಗಿಡವಿದೆ. ಕೃಷ್ಣತುಳಸಿ ಕಪ್ಪಾಗಿಯೂ ರಾಮ ತುಳಸಿ ತಿಳೀ ಬಣ್ಣದ್ದಾಗಿಯೂ ಇರುತ್ತದೆ. ಭಗವಂತನ ಆರಾಧನೆಗೆ ತುಳಸಿದಳವು ಅತೀಮುಖ್ಯವಾದದ್ದು. ಸಹಸ್ರ ವಿಧ ಪುಷ್ಪಗಳಿಂದ ಪೂಜಿಸುವಾಗ ಒಂದು ತುಳಸಿದಳವಿಲ್ಲದೇ ಪೂಜಿಸಿದರೆ, ಅದು ಸಂಪೂರ್ಣ ವ್ಯರ್ಥ. ಈ ತುಳಸಿ ಎಷ್ಟು ಪವಿತ್ರವೋ ಅಷ್ಟೇ ಔಷಧೀಯ ಗುಣಗಳನ್ನೂ ಹೊಂದಿದೆ. ಒಂದು ತುಳಸಿ ದಳವನ್ನು ಧಾನ್ಯದೊಳಗಿಡುವುದರಿಂದ, ಧಾನ್ಯವು ಹುಳುವಿನಿಂದ ರಕ್ಷಿಸಲ್ಪಡುತ್ತದೆ. ರೋಗಾಣುನಾಶಕ, ಅಜೀರ್ಣ, ಜ್ವರ, ಕೆಮ್ಮು, ಕಿವಿನೋವು ನಿವಾರಕ, ರಕ್ತದಲ್ಲಿರುವ ವಿಷದ ಗುಣವನ್ನು ಹೋಗಲಾಡಿಸಿ ರಕ್ತ ಶುದ್ಧಿಮಾಡುವುದು ಈ ತುಳಸಿ. ತುಳಸಿಯಲ್ಲಿ ಯೂಜಿನಾರ್ ಇರುವುದರಿಂದ ನೋವು ನಿವಾರಣೆಯಾಗಿ ಕೊಲೆಸ್ಟ್ರಾಲ್ ಕೂಡ ಕಡಿಮೆಯಾಗುತ್ತದೆ. ತುಳಸಿಯನ್ನು ಅರೆದು ಚರ್ಮಕ್ಕೆ ಸಂಬಂಧಿಸಿದ ವ್ಯಾಧಿ ಇರುವ ಸ್ಥಳದಲ್ಲಿ ಇಟ್ಟು ಕಟ್ಟಿದರೆ ಶೀಘ್ರ ಗುಣ ಕಾಣುವುದರಲ್ಲಿ ಸಂಶಯವಿಲ್ಲ. ಚೇಳು ಕಚ್ಚಿದ ಜಾಗಕ್ಕೆ ತುಳಸಿ ಎಲೆಗಳನ್ನು ಅರೆದು ಕಟ್ಟಿದರೆ ಪರಿಹಾರ ಸಿಗುತ್ತದೆ. ತುಳಸೀರಸವನ್ನು ಕಿವಿಯಲ್ಲಿ ಹಾಕುವುದರಿಂದ ಶಮನವಾಗುವುದು. ನೆಗಡಿಗೆ ತುಳಸಿರಸ ಜೇನುತುಪ್ಪ ಸೇರಿಸಿ ಸೇವಿಸಬೇಕು. ತುಳಸಿರಸ, ಬೆಳ್ಳುಳ್ಳಿರಸ ಮತ್ತು ಜೇನುತುಪ್ಪ ಸಮಪ್ರಮಾಣದಲ್ಲಿ ಕೆಟ್ಟ ಕೆಮ್ಮು ಶಮನವಾಗುತ್ತದೆ. ತುಳಸೀರಸ, ಈರುಳ್ಳಿರಸ, ಶುಂಠಿರಸ, ಜೇನುತುಪ್ಪದೊಡನೆ ಸೇವಿಸಿದರೆ ಕಫ ನಿವಾರಣೆಯಾಗುತ್ತದೆ. ತುಳಸಿಯೊಡನೆ ಕಾಳುಮೆಣಸಿನಪುಡಿ ಬೆರಸಿ ಸೇವಿಸಿದರೆ ಜ್ವರವು ನಿವಾರಣೆಯಾಗುತ್ತದೆ. ಗರ್ಭಿಣಿಯರಿಗೆ ವಾಕರಿಕೆ ಇತ್ಯಾದಿಗಳಿಗೆ ತುಳಸಿರಸವನ್ನು ಮೂರು ಬಾರಿ ಕುಡಿಸಿದರೆ ವಾಂತಿ, ವಾಕರಿಕೆ ತಮನ ವಾಗವುದು ಒಣಗಿಸಿದ ಪುಡಿ ಮತ್ತು ಹಸೀಪುಡಿ ಎರಡೂ ಅನ್ನಕ್ಕೆ ಸೇರಿಸಿ ಊಟ ಮಾಡುವುದೂ ಬಹಳ ಆರೋಗ್ಯಕರ.

**ತುಳಸಿಯ ಕತೆ**

ದಕ್ಷಸಾವರ್ಣಿಯ ವಂಶದಲ್ಲಿ ಧರ್ಮಧ್ವಜ ಮತ್ತು ಮಾಧವಿಯ ಮಗಳು ತುಳಸಿ. ಕಾರ್ತಿಕ ಶುಕ್ರವಾರ ಜನಿಸಿದ ತುಳಸಿಯು ವಿಷ್ಣುವನ್ನೇ ಮದುವೆಯಾಗಬೇಕೆಂದು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ವಿಷ್ಣುವಿನ ಮಾನವರೂಪಿ ಕೃಷ್ಣನನ್ನು ಮದುವೆಯಾಗುವ ವರ ಪಡೆದಳು. ರಾಕ್ಷಸ ರಾಜನಾದ ಶಂಖಚೂಡನ ವೇಷ ಧರಿಸಿ ವಿಷ್ಣುವು ಆಕೆಯನ್ನು ಸೇರುತ್ತಾನೆ. ನಿಜವನ್ನರಿತ ತುಳಸಿಯು ಶಾಪ ಕೊಡುತ್ತಾಳೆ. ವಿಷ್ಣುವು ಶಂಖಚೂಡನ ಕವಚ ಪಡೆಯುತ್ತಾನೆ. ಆತನ ಮೂಳೆಗಳೇ ಶಂಖಗಳಾಗುತ್ತವೆ. ತುಳಸಿಯೂ ತನ್ನ ಪತಿಯೊಡನೆ ಚಿತೆ ಏರಿ ಬೂದಿಯಾಗುತ್ತಾಳೆ. ಆಕೆಯ ಶರೀರ ಗಂಡಕಿ ನದಿಯಾಗುತ್ತದೆ. ಆಕೆಯ ಕೂದಲುಗಳೇ ತುಳಸೀ ಗಿಡವಾಗುತ್ತದೆ. ಶಾಪಗ್ರಸ್ತನಾದ ವಿಷ್ಣುವೂ ಆ ನದಿಯಲ್ಲಿ ಸಾಲಿಗ್ರಾಮ ರೂಪ ತಾಳುತ್ತಾನೆ. ಲಕ್ಷ್ಮೀ ಜನಾರ್ದನ, ವಾಮನ, ರಘುನಾಥ, ಮಧುಸೂದನ, ಸುದರ್ಶನ, ಗದಾಧರ, ಹಯಗ್ರೀವ, ನರಸಿಂಹ, ಲಕ್ಷ್ಮಿ ನರಸಿಂಹ, ವಾಸುದೇವ, ಪ್ರದ್ಯುಮ್ನ, ಸಂಕರ್ಷಣ, ಅನಿರುದ್ಧ ಹಲವು ಬಗೆಯ ಸಾಲಿಗ್ರಾಮಗಳು ಉದ್ಭವವಾಗಿ ಪೂಜೆಗೆ ಅರ್ಹವಾಗಿ ಪೂಜಿಸುವುದರಿಂದ ಅಪಾರ ಫಲವುಂಟು.

**ತುಳಸಿ – ಬೃಂದ:** ತನ್ನ ಮುಂದಿನ ಜನ್ಮದಲ್ಲಿ ರುಕ್ಮಿಣಿಯಾಗಿ ಕಾರ್ತಿಕ ಶುದ್ಧ ದ್ವಾದಶಿಯಂದು ಕೃಷ್ಣನನ್ನು ಮದುವೆಯಾಗುತ್ತಾಳೆ. ತುಳಸಿಯ ಬಗ್ಗೆ ಇನ್ನೊಂದು ಕಥೆ ಎಂದರೆ– ಕ್ಷೀರಸಾಗರ ಮಂಥನ ಮಾಡಿದಾಗ ಅಮೃತ ಉದ್ಭವವಾದಾಗ ವಿಷ್ಣುವಿನ ಆನಂದ ಬಾಷ್ಪಗಳಿಂದ ಹುಟ್ಟಿದ್ದೇ ಈ ತುಳಸಿ. ಭಾಮೆಯು ಶ್ರೀಕೃಷ್ಣನ ತುಲಾಭಾರ ಮಾಡುತ್ತಿದ್ದಾಗ ಆಕೆಯ ಅಪಾರ ಆಭರಣಗಳ ರಾಶಿಯೆಲ್ಲವೂ ಸಾಲದಾದಾಗ ರುಕ್ಮಿಣಿಯು ಭಕ್ತಿಯಿಂದ ಇಟ್ಟ ಒಂದೇ ತುಳಸೀದಳದಿಂದ ಸರಿದೂಗಿತೆಂದು ಒಂದು ಕಥೆ. ಶ್ರೀಕೃಷ್ಣ ವೈಜಯಂತಿಮಾಲಾಧರನೆಂಬುದು ಎಲ್ಲರಿಗೂ ತಿಳಿದ ವಿಷಯ. ಅಮೃತ ಕಲಶವನ್ನು ದೇವತೆಗಳೂ ದಾನವರೂ ಎಳೆದಾಡಿದಾಗ ಕೆಳಗೆ ಚೆಲ್ಲಿದ ಕೆಲವು ಅಮೃತಬಿಂದುವಿನಿಂದ ತುಳಸೀ ಹುಟ್ಟು ತ್ತಾಳೆಂದೂ ಒಂದು ಕಥೆ. ಕಾರ್ತಿಕ ಶುಕ್ಲ ಏಕಾದಶಿ ದಿನ ತುಳಸಿ ಮದುವೆಯೆಂದೂ ಮಾರನೆಯ ದಿನ ದೃಡ ದ್ವಾದಶಿಯನ್ನು ಉತ್ಥಾನ ದ್ವಾದಶಿಯೆಂದೂ ಆಚರಿಸುವುದುಂಟು. ಆ ದಿನ ವಿಶೇಷವಾಗಿ ತುಳಸಿ ಕಟ್ಟೆಗೆ ರಂಗೋಲಿ, ಹೂವು. ಮಾವಿನ ಎಲೆಗಳಿಂದ ಅಲಂಕರಿಸಿ ಕೃಷ್ಣಮೂರ್ತಿಯನ್ನು ಇರಿಸಿ ಪೂಜೆ ಮಾಡುತ್ತಾರೆ.

ದೀಪಾವಳಿಯಂತೆ ಪಟಾಕಿ ಸಿಡಿಸುವುದೂ ಉಂಟು. ತುಳಸಿ ಸನಾತನ ಧರ್ಮೀಯರಿಗೆ ಮಾತ್ರವಲ್ಲದೆ. ಜೈನರಿಗೂ, ಕ್ರೈಸ್ತರಿಗೂ, ಸೂಫಿ ಮುಸಲ್ಮಾನರಿಗೂ ಪೂಜ್ಯವೆಂದು ಪರಿಗಣಿಸಿದೆ. ಬೀಜಾಕ್ಷರಗಳನ್ನು ಉಚ್ಚರಿಸುತ್ತಾ ಸ್ವಾಹಾ ವೃಂದಾವನಿ ಶಬ್ದಗಳಿಂದ ಪೂಜಿಸುವವರಿಗೆ ಸಕಲ ಸಿದ್ಧಿಗಳೂ ಲಭಿಸುತ್ತವೆ. ತುಳಸಿ ವಿಶ್ವಪಾವನಿಯಾಗಿದ್ದು ವಿಶ್ವಪೂಜಿತೆಯಾಗಿದ್ದಾಳೆ. ತುಳಸೀವನದಲ್ಲಿ ಸರ್ವತೀರ್ಥಗಳು ಸಕಲದೇವತೆಗಳೂ ವಾಸಿಸುತ್ತಾರೆ.

**ಪುಷ್ಕರಧ್ಯಾನಿ ತೀರ್ಥಾನಿ ಗಂಗಾದ್ಯಾ:** ಸಂತಸ್ಥಾವಾಸು ದೇವೋ ದಯೋ ದೇವಾಃ ವಸಂತಿ ತುಳಸೀ ವನೆ! ಎಂದು ಶ್ಲೋಕವೊಂದರಲ್ಲಿ ತುಳಸಿಯ ಮಹಾತ್ಮೆಯನ್ನು ತಿಳಿಸಿದರೆ, ಹರಿದಾಸರು ಹೀಗೆ ಹೇಳುತ್ತಾರೆ.

ಒಂದು ದಳ ಶ್ರೀ ತುಳಸೀ ಬಿಂದು ಗಂಗೋದಕವು
ಇಂದಿರಾ ರಮಣನಿಗರ್ಪಿತ
ಎನ್ನಲು ಒಂದೇ ಮನದಿಂದ
ಸಿಂಧುಶಯನನು ತಾನು ಎಂದಿಗೂ
ಹೃದಯದಲ್ಲಿ ವಾಸಿಸುವನು.



**ಶ್ರೀಮತಿ ಇಂದಿರಾ ಗೋವಿಂದ್**
ಮೈಸೂರು

# ಕ್ರಿಸ್ಮಸ್ ಯಾವ ದಿನ



ಡಿಸೆಂಬರ್ 24ರ ರಾತ್ರಿ, ಡಿಸೆಂಬರ್ 25ರ ಹಗಲಿನಲ್ಲಿ ಕ್ರಿಶ್ಚಿಯನ್ನರು ಆಚರಿಸುವ ಸಂಭ್ರಮದ ಹಬ್ಬ ಕ್ರಿಸ್ಮಸ್. ಆದರೆ ಎಲ್ಲಾ ದೇಶಗಳಲ್ಲೂ ಕ್ರಿಸ್ಮಸ್ ಇದೇ ದಿನ ಆಚರಿಸುವುದಿಲ್ಲ ಎಂದರೆ ಅಚ್ಚರಿಯಾಗುತ್ತದೆ. ಯಾಹೂವನ ಸಾಕ್ಷಿಗಳು, ಅಮೆರಿಕದ ಕೆಲವು ಕ್ರಿಶ್ಚಿಯನ್ ಸಂಘಟನೆಗಳ ಅನುಯಾಯಿಗಳು ಕ್ರಿಸ್ಮಸ್ ಹಬ್ಬವನ್ನು ಆಚರಿಸುವುದಿಲ್ಲ. ಅಂದರೆ ಅವರ ಪ್ರಕಾರ ಬೈಬಲ್‌ನಲ್ಲಿ ಕ್ರಿಸ್ಮಸ್ ಆಚರಣೆಯ ಬಗ್ಗೆ ಎಲ್ಲೂ ಹೇಳಿಲ್ಲ.

1647ರಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟ್ ಕ್ರಿಸ್ಮಸ್ ಹಬ್ಬಕ್ಕೆ ನಿಷೇಧ ಹೇರಿತ್ತು. ಪ್ಯೂರಿಟನ್ ನಾಯಕ ಒಲಿವರ್ cromwell ಪ್ರಕಾರ ಕ್ರಿಸ್ಮಸ್ ಪವಿತ್ರ ಹಬ್ಬ. ಆ ದಿನ ಔತಣ ಮತ್ತು ಮೋಜು ನಿಷಿದ್ಧವಾಗಿತ್ತು. 1660ರಲ್ಲಿ ಪಿರಿಟನ್ ಸರ್ಕಾರ ಉರುಳಿದ ಬಳಿಕವೇ ಕ್ರಿಸ್ಮಸ್ ಮತ್ತೆ ಆರಂಭವಾಯಿತು.

ಅಮೆರಿಕಾಗೆ ಆರಂಭದಲ್ಲಿ ವಲಸೆ ಹೋಗಿದ್ದ ಪಿರಿಟನ್‌ಗಳು ಕ್ರಿಸ್‌ಮಸ್ ಆಚರಣೆ ನಡೆಸುತ್ತಾ ಇರಇಲ್ಲ. ಯೇಸು ಜನನದ ಖಚಿತ ದಿನಾಂಕ ತಿಳಿದಿರದ ಕಾರಣ ಕ್ರಿಸ್ಮಸ್ ಆಚರಿಸುವುದು ತಪ್ಪು ಎಂದು ಅವರ ಅಭಿಪ್ರಾಯವಾಗಿತ್ತು. ಕ್ರಿಸ್‌ಮಸ್ ಆಚರಣೆ ಮಾಡುವುದು ಕಾನೂನುಬಾಹಿರ ಎಂದು 1659ರಲ್ಲಿ ಮೆಸೇಶಿವು ಸೆಟ್‌ನಲ್ಲಿ ಕಾಯ್ದೆ ಹೊರಡಿಸಲಾಗಿತ್ತು. ಕಾನೂನು ಮುರಿದವರಿಗೆ ಐದು ಸೇಲಿಂಗ್‌ಗಳ ಜುಲ್ಮಾನೆ ವಿಧಿಸಲಾಗುತ್ತಿತ್ತು.

ಯೇಸು ಕ್ರಿಸ್ತ ಹುಟ್ಟಿದ ದಿನ ಯಾವುದು ಎಂದು ನಿಖರವಾಗಿ ಯಾರಿಗೂ ತಿಳಿದಿಲ್ಲ. ಕ್ರಿಸ್ತಶಕ ಎರಡನೇ ಶತಮಾನದ ವರೆಗೆ ಕ್ರಿಸ್ಮಸ್ ಹಬ್ಬ ಆಚರಿಸುವ ಬಗ್ಗೆ ಎಲ್ಲೂ ದಾಖಲೆಗಳಿಲ್ಲ. ಕ್ರಿಸ್ಮಸ್ ಹಬ್ಬ ಮೂಲತಃ ಕ್ರಿಶ್ಚಿಯನ್ನರ ಹಬ್ಬ ಅಲ್ಲವೇ ಅಲ್ಲ ಎಂದು ವಾದಗಳಿವೆ. ಧರ್ಮಶಾಸ್ತ್ರಜ್ಞರು ಕ್ರಿಸ್ತ ಜನನದ ದಿನವಾಗಿ ವಿಭಿನ್ನ ತಾರೀಕುಗಳನ್ನು ಸೂಚಿಸುತ್ತಿದ್ದರು. ಅಲೆಕ್ಸಾಂಡ್ರಿಯಾದ ಒಬ್ಬ ಬಿಷಪ್ ಪ್ರಕಾರ ಇದು ನಂಬರ್ 18 ಆಗಿತ್ತು. ಉತ್ತರ ಆಫ್ರಿಕಾದಲ್ಲಿ ಸಿಕ್ಕಿದ್ದ ಪಾಶ್ಚಾತ್ಯ ಒಂದು ದಾಖಲೆ ಪ್ರಕಾರ ಇದು ಮಾರ್ಚ್ 28 ಆಗಿತ್ತು.

ಪ್ರಾಚೀನ ಕಾಲದಿಂದ ರೂಮ್‌ನ ಜನರು ಚಳಿಗಾಲದ ಒಂದು ದಿನವನ್ನು ಸೂರ್ಯನ ಜನ್ಮದಿನವನ್ನು ಸಂಭ್ರಮದಿಂದ ಆಚರಿಸುತ್ತಿದರು. ಸಾಮಾನ್ಯವಾಗಿ ಡಿಸೆಂಬರ್ 25ರಂದು ಮಿತ್ರದ ಜನ್ಮದಿನ ಮತ್ತು ಸ್ಯಾಟನಾರಿಯ ಎಂಬ ದೇವತೆಯ ಉತ್ಸವ ನಡೆಸುತ್ತಿದ್ದರು. ಅವರು ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ ಬಳಿಕ ಈ ಆಚರಣೆಗಳು ಮುಂದುವರಿದಿದ್ದವು. ಈ ಉತ್ಸವದ ಫಾಗನ್ ಧರ್ಮಬಾಹಿರ ರೂಪವನ್ನು ಬದಲಿಸಲು ಮತ್ತು ಹಳೆಯ ಕಾಲದ ಸಂಪ್ರದಾಯವನ್ನು ತೊಡೆದು ಹಾಕಲು ಚರ್ಚ್ ಅಧಿಕಾರಿಗಳು ನಾಲ್ಕನೆಯ ಶತಮಾನದ ವೇಳೆಗೆ ಈ ಹಬ್ಬಕ್ಕೆ ಕ್ರಿಸ್ಮಸ್ ಎಂದು ಹೆಸರು ಕೊಟ್ಟು ಕ್ರಿಶ್ಚಿಯನ್ನರ ಹಬ್ಬವಾಗಿ ಮಾಡಿದರು.

ಆರಂಭದಲ್ಲಿ ಕ್ರಿಸ್ಮಸ್ ಹಬ್ಬಕ್ಕೆ ಇರಲಿಲ್ಲ. ಯಾವ ಸಮಯದಲ್ಲಿ ಅದನ್ನು ಆಚರಿಸಬಹುದಿತ್ತು. ಜೂಲಿಯಸ್ ಮೊದಲನೆಯ ಕ್ರಿಸ್ತಶಕ 1320ರಲ್ಲಿ ಆದೇಶದ ಮೇರೆಗೆ ಡಿಸೆಂಬರ್ 25 ಅನ್ನು ಕ್ರಿಸ್ಮಸ್ ಹಬ್ಬವಾಗಿ ನಿಗದಿ ಮಾಡಲಾಯಿತು.

ಇಂದಿಗೂ ವಿವಿಧ ಕ್ರೈಸ್ತ ಪಂಥಗಳು ವಿಭಿನ್ನ ದಿನಗಳಲ್ಲಿ ಕ್ರಿಸ್ಮಸ್ ಹಬ್ಬ ಆಚರಿಸುತ್ತಾರೆ. ಕೆಲವು ದೇಶಗಳಲ್ಲಿ ಡಿಸೆಂಬರ್ 13ರಂದು ಕ್ರಿಸ್ಮಸ್ ಹಬ್ಬ ಆರಂಭವಾದರೆ ಮತ್ತೆ ಕೆಲವು ದೇಶಗಳಲ್ಲಿ ಗ್ರೆಗೋರಿಯನ್ ಕ್ಯಾಲೆಂಡರಿನ ಪ್ರಕಾರ ಜನವರಿ 19ರಂದು ಕ್ರಿಸ್ಮಸ್ ಆಚರಿಸುತ್ತಾರೆ.

ದಕ್ಷಿಣ ಗೋಲಾರ್ಧದಲ್ಲಿ ಇರುವ ನ್ಯೂಜಿಲೆಂಡ್‌ನಲ್ಲಿ ಕ್ರಿಸ್ಮಸ್ ವೇಳೆ ಭಾರೀ ಸೆಕೆ. ಹೀಗಾಗಿ ಜುಲೈ ತಿಂಗಳ ಹಿಮಪಾತದ ವೇಳೆ ಸಂಭ್ರಮದ ಕ್ರಿಸ್ಮಸ್ ಆಚರಿಸಿ, ಡಿಸೆಂಬರ್ 25ರಂದು ವರ್ಷದ ಎರಡನೆಯ ಕ್ರಿಸ್ಮಸ್ ಆಚರಿಸುತ್ತಾರೆ.

ವರ್ಷಕ್ಕೆ ಮೂರು ಕ್ರಿಸ್ಮಸ್ ಆಚರಿಸುವ ಜನರು ಇದ್ದಾರೆ. ಇವರು ಆರ್ಮೇನಿಯರು.

ಟರ್ಕಿಯ ಪೂರ್ವದಲ್ಲಿ, ಏಷ್ಯಾ ಖಂಡದಲ್ಲಿ ಇರುವ ದೇಶ ಆರ್ಮೇನಿಯ. ಇಲ್ಲಿನ ಜನರು ವರ್ಷಕ್ಕೆ ಮೂರು ಬಾರಿ ಕ್ರಿಸ್ಮಸ್ ಆಚರಿಸುತ್ತಾರೆ.

ಸಂಪ್ರದಾಯದ ಪ್ರಕಾರ ಇಲ್ಲಿನವರು ಯೇಸುವಿನ ಜನ್ಮದಿನ ಆಚರಿಸುತ್ತಿದ್ದು ಜನವರಿ 6ರಂದು. ಇವರ ಪ್ರಕಾರ ಇದು ಯೇಸು ಕ್ರಿಸ್ತನ ಬ್ಯಾಪ್ಟಿಸ್ಟನ್ ಆದ ದಿನ. ಹುಟ್ಟಿದ ದಿನವಲ್ಲ. ಕ್ರಿಸ್ತಶಕ ನಾಲ್ಕನೇ

ಶತಮಾನದಲ್ಲಿ ರೋಮಿನ ಚರ್ಚ್ ಅಧಿಕಾರಿಗಳು ಡಿಸೆಂಬರ್ 25 ಅಧಿಕೃತ ಕ್ರಿಸ್ಮಸ್ ದಿನವೆಂದು ಘೋಷಿಸಿದರು. ಆದರೆ ಪೌರಸ್ತ್ಯ ಕಾಣಿಕ ಪಂಥವನ್ನು ಪಾಲಿಸುತ್ತಿದ್ದ ಆರ್ಮೇನಿಯ, ರೋಮನ್ ಕ್ಯಾಥೋಲಿಕ್ ಹೆಚ್ಚಿನ ಅದೇ ದಿನವಾಗಿರಲಿಲ್ಲ. ಇಲ್ಲಿ ಜನವರಿ 6ರಂದು ಕ್ರಿಸ್ಮಸ್ ಆಚರಣೆಯ ಸಂಪ್ರದಾಯ ಮುಂದುವರಿಯಿತು.

ಜಗತ್ತಿನ ಎಲ್ಲೆಡೆ ಇಂದು ಗ್ರೆಗೋರಿಯನ್ ಕ್ಯಾಲೆಂಡರ್ ಬಳಸಲಾಗುತ್ತಿದೆ. ಆದರೆ ಪೌರಸ್ತ್ಯ ಸಾಂಪ್ರದಾಯಿಕ ಚರ್ಚುಗಳಲ್ಲಿ ಇಂದಿಗೂ ಹಬ್ಬ ಹುಣ್ಣಿಮೆಗಳನ್ನು ಗುರುತಿಸಲು ಬಳಸುವ ಕಾಲ ಮಾಪಕ ಪುರಾತನ ಜೂಲಿಯನ್ ಕ್ಯಾಲೆಂಡರ್. ಇದಕ್ಕೂ ನಾವು ಬಳಸುವ ಗ್ರೆಗೋರಿಯನ್ ಕ್ಯಾಲೆಂಡರ್‌ಗೂ 12 ದಿನಗಳ ವ್ಯತ್ಯಾಸವಿದೆ. ಹೀಗಾಗಿ ಕ್ಯಾಲೆಂಡರ್ ಬಳಸುವ ಆರ್ಮೇನಿಯರು ಕ್ರಿಸ್ಮಸ್ ಆಚರಿಸುವುದು ನಮ್ಮ ಕ್ಯಾಲೆಂಡರಿನ ಪ್ರಕಾರ ಜನವರಿ 19ರಂದು.

ಪಾಶ್ಚಾತ್ಯ ದೇಶಗಳಲ್ಲಿ ನೆಲೆಸಿರುವ ಆರ್ಮೇನಿಯ ಜನರು ಉಳಿದವರೊಡನೆ ಡಿಸೆಂಬರ್ 25ರಂದು ಕ್ರಿಸ್ಮಸ್ ಆಚರಿಸಿ ಜನವರಿ 6ರಂದು ತಮ್ಮ ಅವರ ಜೊತೆಗೆ ಮತ್ತೊಮ್ಮೆ ಕ್ರಿಸ್ಮಸ್ ಆಚರಿಸುತ್ತಾರೆ.

ಆರ್ಮೇನಿಯದಲ್ಲಿ ನೆಲೆಸಿರುವ ಗ್ರೀಕ್ ಸಮುದಾಯದ ಜನರು ಗ್ರೆಗೋರಿಯನ್ ಕ್ಯಾಲೆಂಡರ್ ಬಳಸುತ್ತಾರೆ. ಹೀಗಾಗಿ ಜನವರಿ ಏಳರಂದು ಕ್ರಿಸ್ಮಸ್ ಹಬ್ಬ ಆಚರಿಸುತ್ತಾರೆ.

ಇವರ ಹಬ್ಬದ ಆಚರಣೆಯು ಭಿನ್ನವಾಗಿದೆ. ಹಬ್ಬದ 45 ದಿನಗಳ ಹಿಂದಿನಿಂದ ನವೆಂಬರ್ 25ರಿಂದ ಜನವರಿ 6ರ ರಾತ್ರಿ ಅವರಿಗೆ ಇವರು ಸಸ್ಯಹಾರ ಮಾತ್ರ ಸೇವಿಸುತ್ತಾರೆ. ಬಡಬಗ್ಗರಿಗೆ ಮೇಣದಬತ್ತಿ ಹಂಚುತ್ತಾರೆ. ಜೀಸಸ್ ಹುಟ್ಟಿದ ರಾತ್ರಿ ಮೇರಿಯ ಮುಂದೆ ಜೋಸೆಫ್ ಮೇಣದ ಬತ್ತಿಗಳನ್ನು ಉರಿಸಿದ ನೆನಪಿಗಾಗಿ ಈ ಮೇಣದಬತ್ತಿ ಉತ್ಸವ ನಡೆಯುತ್ತದೆ.

ಜನವರಿ 6 ರಾತ್ರಿ ಕ್ರಿಶ್ಚಿಯನ್ನರು ಚರ್ಚಿಗೆ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಕೈರೋದ ಪ್ರಸಿದ್ಧ ಸೈಂಟ್ ಯಾರ್ಕ್ ಕ್ಯಾಥೆಡ್ರಲ್‌ನಲ್ಲಿ ಪೋಪ್ ಪೌರಸ್ತ್ಯ ಸಾಂಪ್ರದಾಯಿಕ ಚರ್ಚಿನ ಧರ್ಮಗುರುವಾಗಿರುವ ಅಲೆಕ್ಸಾಂಡ್ರಿಯಾದ ಪೋಪ್ ರಾತ್ರಿ 11 ಗಂಟೆಗೆ ಪೂಜೆ ಆರಂಭಿಸುತ್ತಾರೆ. ಟೆಲಿವಿಷನ್ ಚಾನೆಲ್‌ಗಳು ಇದರ ನೇರ ಪ್ರಸಾರಣೆ ನಡೆಸುತ್ತವೆ.

ಇಲ್ಲಿನ ಚರ್ಚುಗಳಲ್ಲಿ ವರ್ತನೆಗೆ ಬಳಸುವುದು ಪುರಾತನ ಕೋಟಿ ಬಾಷೆ. ಅರಬ್ಬರು ಈಜಿಪ್ಟಿಗೆ ಕಾಲಿಡುವ ಮುನ್ನ ಇಲ್ಲಿ ಬಳಕೆಯಲ್ಲಿದ್ದ ಬಾಷೆ ಅದು. ಕ್ರಿಸ್ಮಸ್ ದಿನ ಜನರು ಬಡಬಗ್ಗರಿಗೆ ಜುಲ್‌ಆಧ್ಯಾ ಜಿಲೇಬಿ ಮತ್ತು ಮೀನುಗಳನ್ನು ಹಂಚುತ್ತಾರೆ. ಪೂಜೆ ಬಳಿಕ ಶಿಲುಬೆಯ ಆಕೃತಿಯ ವಿಶೇಷ ಬಿಸ್ಕತ್ತುಗಳನ್ನು ತಿನ್ನುತ್ತಾರೆ. ಮನೆಯಲ್ಲಿ ಮಾಂಸದ ಊಟ ಉಣ್ಣುತ್ತಾರೆ.

ಉತ್ತರ ಆಫ್ರಿಕಾದ ಎಥಿಯೋಪಿಯ, ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ್ದ ಪುರಾತನ ದೇಶಗಳಲ್ಲಿ ಒಂದು. ಕ್ರಿಸ್ತಶಕ 1330 ರಲ್ಲಿ ಇಲ್ಲಿನ ಜನರು ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದರು. ಇಲ್ಲಿನವರು ಪೌರಸ್ತ್ಯ ಸಂಪ್ರದಾಯದ ಪ್ರಕಾರ ಕ್ರಿಸ್ಮಸ್ ಆಚರಿಸುವುದು ಜನವರಿ ಏಳರಂದು. ಅದಕ್ಕೆ ಹಿಂದಿನ 40 ದಿನಗಳ ಕಾಲ ಉಪವಾಸ, ಸಸ್ಯಾಹಾರ ಮತ್ತು ಆತ್ಮಶುದ್ಧಿ ನಡೆಸುತ್ತಾರೆ.

ಬೇತ್ಲೇಹೆಂ ಏಸುಕ್ರಿಸ್ತ ಹುಟ್ಟಿದ ಊರು. ಇಲ್ಲಿ ವರ್ಷಕ್ಕೆ ಮೂರು ಬಾರಿ ಕ್ರಿಸ್ಮಸ್ ಆಚರಣೆಯಾಗುತ್ತದೆ. ಹೆಚ್ಚಿನ ಅನುಯಾಯಿಗಳು ಡಿಸೆಂಬರ್ 25ರಂದು ಕ್ರಿಸ್ಮಸ್ ಆಚರಿಸಿದರೆ, ರಷ್ಯನ್ ಚರ್ಚಿನ ಜನರು ಹಬ್ಬದ ಸಂಭ್ರಮ ನಡೆಸುತ್ತಾರೆ. ಸಾಂಪ್ರದಾಯಿಕ ಕ್ರೈಸ್ತರು ಜನವರಿ 6ರಂದು ಕ್ರಿಸ್ತನ ಹುಟ್ಟುಹಬ್ಬವನ್ನು ಆಚರಿಸುತ್ತಾರೆ. ಜೀಸಸ್ ಹುಟ್ಟಿತ್ತು ತಿಳಿದಿರುವಂತೆ ಕುರಿಗಳ ಹಟ್ಟಿಯಲ್ಲಿ ಅಲ್ಲ, ಒಂದು ಗುಹೆಯಲ್ಲಿ. ಪ್ರಾಣಿಗಳನ್ನು ಕಟ್ಟಿಹಾಕಲು ಗೊನೆಗಳನ್ನು ಬಳಸಲಾಗುತ್ತಿತ್ತು. ಈಗ ಆ ಗುಹೆಯ ಮೇಲ್ಭಾಗದಲ್ಲಿ ಒಂದು ದೊಡ್ಡ ಚರ್ಚ್ ಇದೆ. ಅಲ್ಲಿಂದ ಜೀಸಸ್ ಹುಟ್ಟಿದ ಮಗು.

ಬೆತ್ಲೆಹೆಮ್‌ನ ಚರ್ಚ್ ಆಫ್ ನೇಟಿವಿಟಿಯನ್ನು ಚಕ್ರವರ್ತಿ ಜಸ್ಟಿನ್ ಆರನೇ ಶತಮಾನದಲ್ಲಿ ಕಟ್ಟಿಸಿದ್ದ. ಈ ಚರ್ಚು ಇರುವಲ್ಲಿ ಚಕ್ರವರ್ತಿ ಫೋನ್ ಸ್ಟೈಲ್ ಮತ್ತು ಆತನ ತಾಯಿ ಎಲೆನಾ ಕಟ್ಟಿಸಿದ್ದ ಪುರಾತನ ಚರ್ಚೆ ಇತ್ತು. ಅದಕ್ಕೂ ಹಿಂದೆ ಎಲ್ಲಿ ಗ್ರೀಕ್ ದೇವತೆ ಅದೊನಿಸ್ ದೇವಾಲಯುವು ಎನ್ನಲಾಗಿದೆ. ಯೇಸುಕ್ರಿಸ್ತನ ಜನ್ಮಸ್ಥಾನ ಎನ್ನಲಾದ ತಟಗಳ ಮೇಲೆ ಈ ಚರ್ಚುಗಳನ್ನು ಕಟ್ಟಲಾಗಿದೆ.

ಏಳನೇ ಶತಮಾನದಲ್ಲಿ ಪರ್ಷಿಯನ್ನರು ಬೇತ್ಲೆಹೇಮ್ ಮೇಲೆ ದಾಳಿ ಮಾಡಿದ್ದರು. ಇಲ್ಲಿದ್ದ ಮೇಜರ್ ಕ್ರಿಸ್ತನನ್ನು ಭೇಟಿ ಮಾಡಿದ ಮೂವರು ಪೌರಸ್ತ್ಯ ರಾಜರು ಶಿಲ್ಪಗಳನ್ನು ನೋಡಿ ಅವರು ಈ ಚರ್ಚನ್ನು ಹೊರಳಿಸದೆ ಬಿಟ್ಟು ಹೋದರು. ಏಕೆಂದರೆ ಪರ್ಷಿಯಾದ ರಾಜರ ಉಡುಗೆಗಳನ್ನು ತೊಟ್ಟಿದ್ದರು.

ಈ ಚರ್ಚಿನಲ್ಲಿರುವ 14 ಮೂಲಗಳ ಬೆಳ್ಳಿಯ ನಕ್ಷತ್ರ, ಕ್ರಿಸ್ತ ಹುಟ್ಟಿದ ಹಟ್ಟಿಯ ಜಾಗವನ್ನು ತೋರಿಸುತ್ತದೆ. ಇದನ್ನು ಟರ್ಕಿಯ ಸುಲ್ತಾನ ಕೊಟ್ಟ ಎನ್ನಲಾಗಿದೆ. ಈ ನಕ್ಷತ್ರದ ಕೆಳಗೆ ಇಲ್ಲಿ ಕನ್ಯೆ ಮೇರಿಗೆ ಜೀಸಸ್ ಜನಿಸಿದ್ದ ಎಂದು ಲ್ಯಾಟಿನ್ ಭಾಷೆಯಲ್ಲಿ ಬರೆಯಲಾಗಿದೆ. 13ನೇ ಶತಮಾನದಲ್ಲಿ ಐಸಿಸಿಯ ಸಂತ ಫ್ರಾನ್ಸಿಸ್ ಚರ್ಚ್‌ಗೆ ಭೇಟಿ ನೀಡಿ ಗೋದಲಿಯ ರಚನೆಗೆ ಸ್ಫೂರ್ತಿ ಪಡೆದಿದ್ದರು.

# ಸಾಲ ತೀರಿಸುವುದು ಹೇಗೆ



ಮೋಹನ್ ಮನೆ ಮಾಡಲೆಂದು ಹತ್ತು ಲಕ್ಷ ಸಾಲ ಮಾಡಿದ್ದ. ಅದನ್ನು ತೀರಿಸಲು ಪ್ರತಿ ತಿಂಗಳು 10000 ಆತನ ಸಂಬಳದಿಂದ ಜಮೆ ಆಗುತ್ತಿತ್ತು. ಉಳಿದ ಹತ್ತು ಸಾವಿರದಲ್ಲಿ ಸಂಸಾರ ನಡೆಯಬೇಕು. ಬೆಂಗಳೂರಿನಂತಹ ನಗರದಲ್ಲಿ ಅದು ಕಷ್ಟಸಾಧ್ಯ. ಮತ್ತೆ ಅದಕ್ಕಾಗಿ ಸಂಬಂಧಿಕರಲ್ಲಿ ಸಾಲ ಮಾಡಿದ. ಇಂದು ತೀರಿಸಿದರೆ ಆಯಿತು, ನಾಳೆ ಕಟ್ಟಿದರೆ ಆಯ್ತು ಎಂದು ದಿನ ದೂಡುತ್ತಲೇ ಬಂದ. ಈಗ ಸಂಬಂಧಿಕರ ಜೊತೆ ಸಂಬಂಧ ಕೆಟ್ಟಿದೆ. ಅವರು ಆತನನ್ನು ಕೋರ್ಟಿಗೆ ಎಳೆಯುವ ಯೋಚನೆಯಲ್ಲಿದ್ದಾರೆ.

ಸಾಲ ಮಾಡಿಯಾದ್ರೂ ತುಪ್ಪ ತಿನ್ನು ಅಂತ ಬಿಟ್ಟಿ ಉಪದೇಶ ಕೊಡುವ ಮಂದಿ ಬೇಕಾದಷ್ಟಿದ್ದಾರೆ. ಆದರೆ ಈ ರೀತಿ ಎಷ್ಟು ದಿನಾಂತ ಬದುಕೋಕೆ ಸಾಧ್ಯ. ಮಾಡಿದ ಸಾಲವನ್ನು ಒಂದು ದಿನ ತೀರಿಸಲೇ ಬೇಕು. ನೆನಪಿಡಿ, ಇದನ್ನು ತಾತ್ವಿಕವಾಗಿ ನೋಡಿದರೆ ನಮ್ಮ ಜೀವನವೇ ಒಂದು ಸಾಲ. ಅದನ್ನು ಒಂದು ದಿನ ತೀರಿಸಬೇಕು. ಅದು ಒಂದು ಗಂಭೀರವಾದ ವಿಚಾರವಾಯಿತು. ಅದು ವಾಸ್ತವ ಬದುಕಿನ ಸಾಲದ ವಿಚಾರವು ಗಂಭೀರವೇ. ಸರಿಯಾದ ಸಮಯದಲ್ಲಿ ತೀರಿಸದಿದ್ದರೆ ಅದು ಕೊರಳಿಗೆ ಸುತ್ತಿಕೊಳ್ಳುತ್ತದೆ. ಸಾಲ ಮಾಡುವಾಗ ಹಾಲೋಗರ ಉಂಡಂತೆ, ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಎಂಬ ಸರ್ವಜ್ಞನ ಮಾತು ನೀವು ಕೇಳಿದಿರಲ್ಲವೆ?

ಕೈಗೆ ಸಿಗುವ ಸಂಬಳ ಖರ್ಚಿಗೇ ಸಾಲದೇ ಇರುವಾಗ ಪಡೆದ ಸಾಲ ತೀರಿಸಲು ಪರದಾಡಬೇಕಿಲ್ಲ. ಶ್ರಮವಹಿಸಿ ದುಡಿದು ಮಾನವಾಗಿ ಬದುಕಬೇಕೆಂದು ಅವರಿಗೆ ಒಂದಲ್ಲ ಒಂದು ದಾರಿ ಇದ್ದೇ ಇದೆ. ಕೈಗೆ ಸಿಗುವ ಸಂಬಳ ಖರ್ಚಿಗೇ ಸಾಲದಿರುವಾಗ ಪಡೆದ ಸಾಲ ತೀರಿಸೋದಾದ್ರೂ ಹೇಗೆ ಎಂದು ಪರದಾಡಬೇಕಿಲ್ಲ. ಶ್ರಮವಹಿಸಿ ದುಡಿದು ಮಾನವಾಗಿ ಬದುಕಬೇಕೆನ್ನುವವರಿಗೆ ಒಂದಲ್ಲ ಒಂದು ದಾರಿ ಇದ್ದೇ ಇದೆ. ಒಂದಷ್ಟು ದಿನ ಗಂಜಿ ತಿಂದಾದರೂ ಸರಿ ಸಾಲವನ್ನು ನಿಯತ್ತಾಗಿ ತೀರಿಸಬೇಕೆನ್ನುವವರಿಗೆ ಈ ಕೆಳಗಿನ ಸೂತ್ರಗಳನ್ನು ಅಳವಡಿಸಿಕೊಳ್ಳಿ.

**1. ಉಳಿತಾಯ:** ಹನಿಹನಿಗೂಡಿದರೆ ಹಳ್ಳ ಈ ಮಾತನ್ನು ನಾವು ಆಗಾಗ ಕೇಳುತ್ತಲೇ ಇರುತ್ತೇವೆ. ಹಾಗಿದ್ರೆ ಜೀವನದಲ್ಯಾಕೆ ಅಳವಡಿಸಿಕೊಂಡು ನೋಡಬಾರದು? ಹೇಗಂತೀರಾ? ತೀರ ದೊಡ್ಡದೂ ಅಲ್ಲದ ಸಣ್ಣದೂ ಅಲ್ಲದ ರಟ್ಟಿನ ಖಾಲಿ ಪೆಟ್ಟಿಗೆಯೊಂದನ್ನು ತೆಗೆದುಕೊಳ್ಳಿ. ಗಮ್‌ಟೇಪ್‌ನಿಂದ ಅದರ ನಾಲ್ಕೂ ಕಡೆ ಮುಚ್ಚಿ. ಬಳಿಕ ನೋಟು ತೂರಿಸಬಹುದಾದಷ್ಟು ಗಾತ್ರದ ತೂತೊಂದನ್ನು ಮಾಡಿ. ಈ ಬಾಕ್ಸ್‌ಗೆ ಪ್ರತಿದಿನ ನಿಮಗೆ ಸಾಧ್ಯವಾಗುವಷ್ಟು ಹಣವನ್ನು ಹಾಕುತ್ತಿರಿ. ಕೆಲ ತಿಂಗಳು ಬಿಟ್ಟು ನೋಡಿ. ದೊಡ್ಡ ಮೊತ್ತದ ಹಣ ಸಂಗ್ರಹವಾಗಿರುತ್ತದೆ. ಸಣ್ಣಪುಟ್ಟ ಕೈಗಡ ತೀರಿಸಲು ಇದು ಸಾಕಲ್ವೆ?

**2. ಬಜೆಟ್:** ಬಜೆಟ್‌ಗೂ ಸಾಲಕ್ಕೂ ಏನಪ್ಪಾ ಸಂಬಂಧ ಅಂತ ನೀವು ಕೇಳಬಹುದು. ಖಂಡಿತಾ ಸಂಬಂಧ ಇದೆ. ಬಜೆಟ್ ಅನ್ನು ಸರ್ಕಾರಗಳಿಗಷ್ಟೇ ಸೀಮಿತ ಅಲ್ಲ. ನಿಮ್ಮ ವೈಯಕ್ತಿಕ ಬದುಕಿಗೂ ಇದನ್ನು ಅನ್ವಯಿಸಬಹುದು. ಮೈಮೇಲೆ ಸಾಲ ಎಳೆದುಕೊಂಡವರು ತಿಂಗಳ ಮೊದಲೇ ಎಷ್ಟು ಖರ್ಚು ಮಾಡಬೇಕು. ಎಷ್ಟು ಉಳಿತಾಯ ಮಾಡಬೇಕು ಎಂದು ಲೆಕ್ಕ ಹಾಕಿಟ್ಟುಕೊಂಡರೆ ಸಾಲ ತೀರಿಸುವುದು ಕಷ್ಟವೇನಲ್ಲ.

**3. ಪಾರ್ಟ್‌ಟೈಂ ಜಾಬ್:** ದುಡಿಯುತ್ತಿರುವ ಸಂಬಳ ಸಂಸಾರ ನಡೆಸೋಕೆ ಸಾಧ್ಯವಾಗ್ತಿಲ್ಲ. ಅಂತಾದ್ರಲ್ಲಿ ಸಾಲ ಹೇಗೆ ತೀರಿಸೋದು ಎನ್ನುವ ಚಿಂತನೆಯೆ? ಯಾವುದಾದರೂ ಪಾರ್ಟ್‌ಟೈಂ ಜಾಬ್ ಸೇರ್ಕೊಳ್ಳಿ. ಈ ಕೆಲಸದಿಂದ ಸಿಗುವ ವೇತನ ಸಣ್ಣದಾದರೂ ನಿಮ್ಮ ಸಾಲದ ಹೊರೆಯನ್ನು ಕಡಿಮೆ ಮಾಡುತ್ತದೆ.

**4. ಗರ್ಲ್‌ಫ್ರೆಂಡ್‌ಗಳಿಂದ ದೂರವಿರಿ:** ತಮಾಷೆ ಮಾಡ್ತಿದ್ದೀರಾ ಅಂದ್ಕೊಡಿದ್ದೀರಾ? ಖಂಡಿತಾ ಇಲ್ಲ. ಕೆಲವರ ಬದುಕು ಸಾಲದ ಸುಳಿಗೆ ಬೀಳೋದೆ ಈ ಗರ್ಲ್‌ಫ್ರೆಂಡ್‌ಗಳಿಂದ. ಗರ್ಲ್‌ಫ್ರೆಂಡ್ ಜೊತೆಗಿದ್ದರೆ ಕಾಫಿಡೇಗೆ, ಸಿನಿಮಾಗೆ ಅಂತ ವಾರಕ್ಕೊಂದು ದಿನವಾದರೂ ಕರೆದುಕೊಂಡು

ಹೋಗಲೇಬೇಕು. ಅದಕ್ಕೆಲ್ಲ ನಿಮ್ಮ ಕಿಸೆಯಿಂದಲೇ ಹಣ ನೀಡಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕೈಯಲ್ಲಿ ದುಡ್ಡಿದ್ದಾಗ ಇದೆಲ್ಲಾ ಓಕೆ. ಸಾಲ ಮೈಮೇಲೆ ಎಳೆದುಕೊಂಡಾಗ ಇದೆಲ್ಲ ಯಾಕೆ? ನಿಮ್ಮ ಸಮಸ್ಯೆಯನ್ನು ಅವಳಿಗೆ ಹೇಳಿ. ಅವಳು ನಿಜವಾಗಿಯೂ ಪ್ರೀತಿಸುತ್ತಿದ್ದರೆ ಅರ್ಥ ಮಾಡಿಕೊಳ್ಳುತ್ತಾಳೆ.

**5. ಗುಂಡು, ಸಿಗರೇಟು ಬಿಡೋಕಾಗಲ್ವಾ?:** ಬಹುತೇಕರು ತಿಂಗಳ ಸಂಬಳದ ಬಹುದೊಡ್ಡ ಪಾಲನ್ನು ಸುರಿಯೋದು ಗುಂಡು, ಸಿಗರೇಟಿಗಾಗಿ. ಮನಸ್ಸು ಮಾಡಿದರೆ ಇವನ್ನು ಬಿಡುವುದು ಕಷ್ಟವೇನಲ್ಲ. ಆದರೆ ಸಾಧ್ಯವೇ ಇಲ್ಲ ಅನ್ನುವವರು ಸಿಗರೇಟು, ಗುಂಡಿನ ಪ್ರಮಾಣ ಕಡಿಮೆ ಮಾಡಿಕೊಳ್ಳಬಹುದು. ಇದರಿಂದ ನಿಮ್ಮ ಖರ್ಚಿನ ಬಾಬ್ತು ಸ್ವಲ್ಪಮಟ್ಟಿಗೆ ಇಳಿಕೆಯಾಗುತ್ತದೆ. ಸಾಲ ತೀರಿಸುವುದು ಸುಲಭವಾಗುತ್ತದೆ.

**6. ಶಾಪಿಂಗ್ ಕಡಿಮೆ ಮಾಡಿ:** ಕೆಲವರಿಗೆ ಅಗತ್ಯವಿರಲಿ, ಇಲ್ಲದಿರಲಿ ಶಾಪಿಂಗ್ ಮಾಡೋದೊಂದು ಖಯಾಲಿ. ಗೆಳೆಯರ ತಂಡ ಕಟ್ಟಿಕೊಂಡು ಶಾಪಿಂಗ್ ಹೋಗ್ತಾರೆ. ಬೇಡದಿದ್ದರೂ ಒಂದಷ್ಟು ಬಟ್ಟೆಬರೆಗಳನ್ನು ಕೊಂಡು ತರುತ್ತಾರೆ. ಅಲ್ಲಲ್ಲಿ ಸಾಲ ಮಾಡಿಕೊಂಡಿರುವಾಗ ಹೀಗೆಲ್ಲ ದುಂದುವೆಚ್ಚ ಮಾಡಿದ್ರೆ ಹೇಗೆ? ಸಾಲ ತೀರಿಸುವವರೆಗಾದರೂ ಅನಗತ್ಯ ಶಾಪಿಂಗ್‌ಗೆ ಕಡಿವಾಣ ಇರಲಿ.

**7. ವಿದ್ಯುತ್ ಉಳಿತಾಯ:** ವಿದ್ಯುತ್ ಉಳಿತಾಯ ಮಾಡುವುದರಿಂದ ಎರಡು ಲಾಭ ಇದೆ. ಮೊದಲನೆಯದು ನಿಮ್ಮ ಕಿಸೆಗೆ, ಎರಡನೆಯದು ಪರಿಸರಕ್ಕೆ, ವಿದ್ಯುತ್ ಅನ್ನು ಹಿತಮಿತವಾಗಿ ಬಳಸುವುದರಿಂದ ನಿಮ್ಮ ಸಾಲನೇನೂ ತೀರುವುದಿಲ್ಲ. ಆದರೆ, ಅನಗತ್ಯ ವೆಚ್ಚಕ್ಕೆ ಕಡಿವಾಣವಂತೂ ಬೀಳುತ್ತದೆ. ಜೊತೆಗೆ ನಿಮ್ಮ ಹಣಕಾಸು ಹೊರೆಯನ್ನೂ ಕಡಿಮೆ ಮಾಡುತ್ತದೆ.

**8. ಫಿಲ್ಮ್‌ಗೆ ಹೋಗೋದು ಕಡಿಮೆ ಮಾಡಿ:** ಗೆಳೆಯನಿಂದ ಕೈಗಡ ಮಾಡಿಕೊಂಡಿರುತ್ತೀರಿ. ಆ ಸಾಲ ತೀರಿಸುವ ಬದಲು ಅವನ ಎದುರೇ ನೀವು ವಾರಕ್ಕೊಂದು ಸಿನಿಮಾಗೆ ಹೋಗುತ್ತಿದ್ದರೆ ಗೆಳೆಯನಿಗೆ ಹೇಗಾಗಬೇಡ? ಅಷ್ಟಕ್ಕೂ ಹಣ ಮರದಿಂದೇನೂ ಉದುರುವುದಿಲ್ಲ. ಅದು ಅವನು ಕಷ್ಟಪಟ್ಟು ದುಡಿದ ಹಣ. ಅದಕ್ಕಾಗಿ ಬಡ್ಡಿಯನ್ನೂ ವಸೂಲಿ ಮಾಡಲ್ಲ. ಇಷ್ಟಾದರೂ ಅವನ ಹಣವನ್ನು ಟೇಕ್ ಫಾರ್ ಗ್ರ್ಯಾಂಟೆಡ್ ಆಗಿ ತೆಗೆದುಕೊಳ್ಳುವುದು ಸರಿಯೆ? ಸಿನಿಮಾ ನೋಡುವ ಹುಚ್ಚು ಕಡಿಮೆ ಮಾಡಿ. ಈ ಮೂಲಕ ಉಳಿಯುವ ಹಣದಿಂದ ಸಾಲ ತೀರಿಸಿ.

**9. ಮನೆಯಲ್ಲೇ ಅಡುಗೆ ಮಾಡ್ಕೊಳ್ಳಿ:** ಬ್ಯಾಚುಲರ್ಸ್‌ಗಳಿಗೂ ಹೋಟೆಲ್ ಊಟಕ್ಕೂ ಅವಿನಾಭಾವ ಸಂಬಂಧ. ತರಕಾರಿ ಹೆಚ್ಚೋದು, ಪಾತ್ರೆ ತೊಳೆಯೋದು ಯಾರಪ್ಪಾ ಮಾಡ್ತಾರೆ? ಅನ್ನುವ ಅವರು ದುಡಿದದ್ದನ್ನೆಲ್ಲ ಹೋಟೆಲ್‌ಗೆ ಸುರಿತಾರೆ. ಒಂದೆರಡು ತಿಂಗಳು ಮನೆಯಲ್ಲೇ ಅಡುಗೆ ಮಾಡಿ ನೋಡಿ. ಆರೋಗ್ಯನೂ ಸರಿಯಾಗಿರುತ್ತದೆ. ಹಣನೂ ಉಳಿತಾಯ ಆಗುತ್ತದೆ. ಮನೆ ಅಡುಗೆಯಿಂದ ತಿಂಗಳಿಗೆ ಒಂದೆರಡು ಸಾವಿರ ಉಳಿಸಿದರೂ ವರ್ಷಕ್ಕೆ ಎಷ್ಟಾಗುತ್ತದೆ ನೀವೇ ಯೋಚಿಸಿ ನೋಡಿ.

**10. ಬ್ಯೂಟಿ ಪಾರ್ಲರ್‌ನಿಂದ ದೂರ:** ಬ್ಯೂಟಿಪಾರ್ಲರ್‌ಗೆ ಕಾಲಿಟ್ಟ ತಕ್ಷಣ ಫೇಶಿಯಲ್, ಕ್ಲಿನ್ ಅಪ್, ಬ್ಲೀಚಿಂಗ್ ಎಂದೆಲ್ಲಾ ಹೇಳಿ ನಿಮ್ಮನ್ನು ಮರುಳುಗೊಳಿಸುವವರೇ ಜಾಸ್ತಿ. ಅದಕ್ಕೆಲ್ಲ ತಲೆಕೆಡಿಸಿಕೊಳ್ಳಬೇಡಿ. ನಾನು ನೋಡಲು ಸುಂದರವಾಗಿಯೇ ಇದ್ದೇನೆ ಎಂದುಕೊಳ್ಳಿ. ಅಲ್ಲಿಂದ ಮೊದಲು ಕಾಲ್ಕೀಳಿ.

**11. ಮೊಬೈಲ್ ಇಂಟರ್‌ನೆಟ್:** ಮನೆಯಲ್ಲೂ ಇಂಟರ್‌ನೆಟ್ ಸಂಪರ್ಕ ಪಡೆದುಕೊಂಡಿರುತ್ತೀರಿ. ಇನ್ನು ಮೊಬೈಲ್‌ಗೂ 3ಜಿ ಸಂಪರ್ಕ ಪಡೆದುಕೊಂಡಿರುತ್ತೀರಿ. ಸಾಲ ಮಾಡಿಕೊಂಡಿರುವಾಗ ಈ ರೀತಿಯ ದುಂದುವೆಚ್ಚ ಬೇಕಾ? ಒಂದು ಮೊಬೈಲ್ ಇಂಟರ್‌ನೆಟ್ ಕ್ಯಾನ್ಸಲ್ ಮಾಡಿ. ಇಲ್ಲಾಂದ್ರೆ ಕಂಪ್ಯೂಟರ್‌ಗೆ ಹಾಕಿರುವ ಇಂಟರ್‌ನೆಟ್ ಸೌಲಭ್ಯವನ್ನು ರದ್ದು ಮಾಡಿ. ವೈಫೈ ಅಥವಾ ಬ್ಲೂಟೂತ್ ಮೂಲಕ ಕಂಪ್ಯೂಟರ್‌ಗೆ ಮೊಬೈಲ್ ಇಂಟರ್‌ನೆಟ್ ಸಂಪರ್ಕ ಕಲ್ಪಿಸಿ.

**12. ಸಣ್ಣ ಉಳಿತಾಯ:** ಮನೆಯಲ್ಲೊಂದು ಸಣ್ಣದೊಂದು ಬಾಕ್ಸ್ ಅನ್ನು ಬ್ಯಾಂಕ್ ರೀತಿ ಮಾಡಿಕೊಳ್ಳಿ. ಪ್ರತಿದಿನ ಇಂತಿಷ್ಟು ಹಣವನ್ನು ಆ ಬಾಕ್ಸ್‌ಗೆ ಹಾಕುತ್ತೀರಿ. ನೀವು ಆ ಬಾಕ್ಸ್‌ನೊಳಕ್ಕೆ ಹಾಕುತ್ತಿರುವ ಹಣದ ಮೊತ್ತ ಕಡಿಮೆ ಇರಬಹುದು. ಆದರೆ, ತಿಂಗಳ ಅಂತ್ಯದ ವೇಳೆಗೆ ಆ ಮೊತ್ತ ದೊಡ್ಡದಾಗಿರುತ್ತದೆ ಎಂಬುದು ನೆನಪಿನಲ್ಲಿಟ್ಟುಕೊಳ್ಳಿ. ಯಾಕೆಂದರೆ ಹನಿಹನಿಗೂಡಿದರೇನೆ ಹಳ್ಳ.

**(ಮುಂದುವರೆಯುವುದು)**

# ಆರೋಗ್ಯದ ಕೀಲಿಕೈ ನಾಲಿಗೆ



ಬಾಯಿಯ ದುರ್ವಾಸನೆ ಸಾಮಾಜಿಕವಾಗಿ ಇತರರೊಂದಿಗೆ ಬೆರೆಯಲು ಅಡ್ಡಿ ಉಂಟು ಮಾಡುವ ಆತ್ಮವಿಶ್ವಾಸ ಕುಗ್ಗಿಸುವ ಸಮಸ್ಯೆಗಳಲ್ಲೊಂದು. ದಿನಕ್ಕೆರಡು ಬಾರಿ ಚೆನ್ನಾಗಿ ಹಲ್ಲುಜ್ಜಿ ಮೌತ್‌ವಾಶ್ ಬಳಸಿದರೆ ದುರ್ವಾಸನೆ ಕಡಿಮೆ ಆಗುತ್ತಿಲ್ಲ ಎಂಬುದು ಅತಿ ಸಾಮಾನ್ಯ ದೂರು. ಹಲ್ಲು ಉಜ್ಜುವುದು ನಮ್ಮ ದಿನಚರಿಯ ಅಂಗವಾಗಿದ್ದರೂ ನಾಲಿಗೆಯನ್ನು ಸ್ವಚ್ಛಗೊಳಿಸುವುದರ ಬಗ್ಗೆ ಅರಿವು ತೀರಾ ಕಡಿಮೆ. ನಿಮಗೆ ಗೊತ್ತೇ? ಬಾಯಿಯ ದುರ್ವಾಸನೆಗೆ ಕನ್ನಡಿ ಕೊಳಕಾದ ನಾಲಿಗೆ.

**ಕೊಳಕಾಗುವುದೇಕೆ?:** ಆಹಾರದ ರುಚಿ ತಿಳಿಯಲು, ಮಾತು, ನುಂಗುವಿಕೆ ಈ ಎಲ್ಲ ಕ್ರಿಯೆಗಳಿಗೂ ಅಗತ್ಯವಾದ ಅಂಗ ನಾಲಿಗೆ, ನೋಡಲು ನುಣುಪಾದ ಮೇಲ್ಮೈ ಹೊಂದಿದೆ. ಇದಕ್ಕೆ ಕಾರಣ ಅತಿ ಸೂಕ್ಷ್ಮವಾದ ಉಬ್ಬು ತಗ್ಗು ಮತ್ತು ಮಡಿಕೆಗಳು. ಆಹಾರದ ಕೊಳೆಯುವಿಕೆಯಿಂದ ಉತ್ಪತ್ತಿಯಾಗುವ ಸೂಕ್ಷ್ಮಾಣುಜೀವಿಗಳು ಅಡಗಲು ಪ್ರಶಸ್ತ ತಾಣ. ಇಂತಹ ಸಂಧಿಗೊಂದಿಗಳು ಈ ಸೂಕ್ಷ್ಮಾಣುಜೀವಿಗಳ ಹಾನಿಕಾರಕ ವಸ್ತು ದುರ್ವಾಸನೆ ಉಂಟುಮಾಡುತ್ತವೆ.

ರಾತ್ರಿ ನಾವು ಮಲಗಿದ್ದರೂ ದೇಹದ ಜೀರ್ಣಾಂಗ ವ್ಯವಸ್ಥೆ ನಿರ್ವಹಿಸುತ್ತದೆ. ದೇಹದಲ್ಲಿನ ವಿಷಯುಕ್ತ ಪದಾರ್ಥಗಳು ನಾಲಿಗೆಯ ಹೊರಭಾಗದಲ್ಲಿ ಶೇಖರವಾಗುತ್ತವೆ. ಅದರೊಂದಿಗೆ ಸಹಜವಾಗಿಯೇ ನಾಶವಾದ ಜೀವಕೋಶಗಳು, ಸೂಕ್ಷ್ಮಾಣು ಜೀವಿಗಳು ಸೇರಿ ನಾಲಿಗೆ ಮೇಲೆ ದಪ್ಪವಾದ ಬಿಳಿ, ಬೋದು, ಕಂದುಬಣ್ಣದ ಪದರ ಕಾಣಿಸಿಕೊಳ್ಳುತ್ತದೆ.

**ಸ್ವಚ್ಛ ಮಾಡಬೇಕೆ?:** ನಾಲಿಗೆಯ ಮೇಲಿರುವ ಪದರದಲ್ಲಿ ಐನೂರಕ್ಕೂ ಹೆಚ್ಚು ಜಾತಿಯ ಲಕ್ಷಾಂತರ ಸೂಕ್ಷ್ಮಾಣುಜೀವಿಗಳು ಇರುತ್ತವೆ. ನಾಲಿಗೆಯ ಮುಂಭಾಗದಲ್ಲಿ ಪದರ ಕಡಿಮೆ. ಯಾಕೆಂದರೆ ಈ ಭಾಗ ನಮ್ಮ ಅಂಗುಳಿನ ಗಟ್ಟಿ ಭಾಗವನ್ನು ಮಾತು, ನುಂಗುವಿಕೆಯಲ್ಲಿ ಬಲವಾಗಿ ಒತ್ತುವುದರಿಂದ ಘರ್ಷಣೆ ಉಂಟಾಗಿ ಕೆಲ ಮಟ್ಟಿಗೆ ಸ್ವಚ್ಛವಾಗುತ್ತದೆ. ಆದರೆ ಹಿಂಭಾಗದಲ್ಲಿನ ಮೆದು ಭಾಗವನ್ನು ಮಾತ್ರ ಸ್ಪರ್ಶಿಸುವುದರಿಂದ ತನ್ನಿಂತಾನೇ ಸ್ವಚ್ಛವಾಗುವ ಸಾಧ್ಯತೆ ಕಡಿಮೆ. ಹೀಗಾಗಿ ನಾಲಿಗೆ ಹಿಂಭಾಗದಲ್ಲಿ ಕೊಳಕಿನ ಪದರ ಅತಿ ದಪ್ಪ ಮತ್ತು ಹೆಚ್ಚು.

**ಸ್ವಚ್ಛ ಮಾಡುವುದು ಹೇಗೆ?:** ಬ್ರಷ್ಸಿಂಗ್ ಹಾಗೂ ಕ್ರಾಸ್ ಬಳಕೆಯನ್ನು ಹಲ್ಲುಗಳು ಮತ್ತು ಅವುಗಳ ನಡುವಿನ ಭಾಗವನ್ನು ಸ್ವಚ್ಛಗೊಳಿಸಲು ರೂಪಿಸಲಾಗಿದೆ. ನಾಲಿಗೆಯ ಮೇಲಿರುವ ಕೊಳಕಿನ ಪದರವನ್ನು ಕೆರೆದು ತೆಗೆಯಬೇಕಾಗಿರುವುದರಿಂದ ವಿಶೇಷ ಸಾಧನವಾದ ಟಂಗ್ ಕ್ಲೀನರ್ ಅಗತ್ಯ.

ಯು ಆಕಾರದ ಹಿಡಿಕೆಯುಳ್ಳ ಲೋಹ, ಪ್ಲಾಸ್ಟಿಕ್ ಸಾಧನ ಬಳಸಿ.

ಬೆಳಗ್ಗೆ ಎದ್ದ ತಕ್ಷಣ ಹಲ್ಲು ಉಜ್ಜುವುದರ ಜೊತೆಗೆ ನಾಲಿಗೆ ಸ್ವಚ್ಛಗೊಳಿಸಬೇಕು. ಯಾಕೆಂದರೆ ಬಿಳಿ ಪದರ ಹೆಚ್ಚುತ್ತದೆ ಮತ್ತು ಖಾಲಿ ಹೊಟ್ಟೆಯಲ್ಲಿ ಇರುವುದರಿಂದ ವಾಕರಿಕೆ ಉಂಟಾಗುವ ಸಂಭವ ಕಡಿಮೆ.

ಉಗುರು ಬೆಚ್ಚಗಿನ ನೀರಿನಲ್ಲಿ ಬಾಯಿ ಮುಕ್ಕಳಿಸುವುದರಿಂದ ನಾಲಿಗೆಯ ಮೇಲ್ಪದರ ಸಡಿಲವಾಗಿ ಕೆರೆಯಲು ಸುಲಭವಾಗುತ್ತದೆ.

ದೇಹವಿಲ್ಲದ ಟಂಗ್ ಕ್ಲೀನರ್‌ನನ್ನು ನಾಲಿಗೆ ಆದಷ್ಟು ಹಿಂದಿನಿಂದ ಹಾಕಿ. ಆದರೆ ನಯವಾಗಿ ಹಿಂದಿನಿಂದ ಮುಂದಕ್ಕೆ ಎಳೆಯಬೇಕು. ಹೀಗೆ ಕೆರೆದಾಗ ಬಿಳಿಯ ಅಂಟು ಪದರ ಹೊರಬರುತ್ತದೆ. ಅದನ್ನು ತೊಳೆದು ಹತ್ತಾರು ಬಾರಿ ನಾಲಿಗೆ ಸ್ವಚ್ಛವಾಗುವ ತನಕ ಹಿಂದೆಮುಂದೆ, ಎಡ–ಬಲ ಬದಿಗಳಿಗೆ ಮಾಡಬೇಕು. ಪೂರ್ತಿ ಸ್ವಚ್ಛವಾದ ಅನಂತರ ಗುಲಾಬಿ ಬಣ್ಣದ ತೇವಯುಕ್ತ ನಾಲಿಗೆ ಹಲ್ಲಿನ ನಡುವೆ ಹೊಳೆಯುತ್ತದೆ.

ಟಂಗ್ ಕ್ಲೀನರ್ ಅನ್ನು ಬಿಸಿನೀರು ಹಾಕಿ ಚೆನ್ನಾಗಿ ತೊಳೆದು ಒಣಗಿಸಿ ಇಡಬೇಕು.

ಮೊದಮೊದಲಿಗೆ ವಾಕರಿಕೆ ಬರುವುದು ಹೆಚ್ಚು ಸಮಯ ಹಿಡಿಯುವುದು ಸಾಮಾನ್ಯ. ಅಭ್ಯಾಸವಾದಂತೆ ದಿನಕ್ಕೊಂದು ಬಾರಿ, ಕೇವಲ ಒಂದು ನಿಮಿಷದಲ್ಲಿ ನಾಲಿಗೆಯನ್ನು ಸ್ವಚ್ಛ ಮಾಡಬಹುದು.

**ಪ್ರಯೋಜನಗಳು ಹಲವು**

**ದುರ್ವಾಸನೆ ದೂರ:** ನಿತ್ಯ ಹಲ್ಲು ಉಜ್ಜುವುದರ ಜೊತೆ ನಾಲಿಗೆ ಸ್ವಚ್ಛಗೊಳಿಸಿದರೆ ಬಾಯಿಯ ವಾಸನೆ ದೂರವಾಗುತ್ತದೆ. ದುರ್ವಾಸನೆಗೆ ಶೇಕಡ 50 ರಷ್ಟು ಕಾರಣ ಕೊಳಕು ನಾಲಿಗೆ. ವಾಸನೆ ದೂರವಾದಾಗ ಆತ್ಮವಿಶ್ವಾಸ ಹೆಚ್ಚಿ ಒಡನಾಟ ಸುಲಭ.

**ಆಹಾರದ ರುಚಿ ಹೆಚ್ಚಳ:** ಆರಂಭ ರುಚಿ ಮತ್ತು ಲಾಲಾರಸದಿಂದ ನಾಲಿಗೆ ಮೇಲಿನ ಪದರದಿಂದ ರುಚಿ ಮೊಗ್ಗುಗಳು ಆವೃತವಾಗಿದ್ದಾಗ ರುಚಿ ಸಿಗುವುದಿಲ್ಲ. ಜೊಲ್ಲು ಸರಿಯಾಗಿ ಉತ್ಪತ್ತಿಯಾಗುವುದಿಲ್ಲ. ಹೀಗಾಗಿ ಪದರ ಇಲ್ಲದೆ ಇದ್ದಾಗ ರುಚಿ ಜೊಲ್ಲು ಹೆಚ್ಚಿ ಜೀರ್ಣಕ್ರಿಯೆ ಸರಾಗವಾಗುತ್ತದೆ.

**ರೋಗ ನಿರೋಧಕ ಶಕ್ತಿಯಲ್ಲಿ ಹೆಚ್ಚಳ:** ನಾಲಿಗೆಯ ಪದರದಲ್ಲಿರುವ ವಿಷಯುಕ್ತ ಪದಾರ್ಥಗಳನ್ನು ತೆಗೆಯದೆ ಇದ್ದಾಗ ಅವು ಪುನಃ ದೇಹದೊಳಗೆ ಪ್ರವೇಶಿಸುತ್ತವೆ. ಇದರಿಂದ ನಾನಾ ರೋಗಗಳು ಬರುವ ಸಾಧ್ಯತೆ ಇದೆ. ಸ್ವಚ್ಛಗೊಳಿಸಿದಾಗ ತ್ಯಾಜ್ಯ ಹೊರ ಹೋಗುತ್ತದೆ.

**ಹೃದಯ:** ನಾಲಿಗೆಯ ಮೇಲಿರುವ ಸಣ್ಣ ರಕ್ತನಾಳಗಳ ಮೂಲಕ ಸೂಕ್ಷ್ಮಾಣುಜೀವಿಗಳು ರಕ್ತಚಲನೆಯನ್ನು ಪ್ರವೇಶಿಸಿ ಆ ಮೂಲಕ ಹೃದಯಕ್ಕೆ ಹಾನಿ ಮಾಡಬಹುದು.

ನಾಲಿಗೆ ಸ್ವಚ್ಛವಾಗಿದ್ದಾಗ ಹೃದಯವು ಆರೋಗ್ಯಕರವಾಗಿರುತ್ತದೆ.

**ಉತ್ತಮ ಬಾಯಿ ಆರೋಗ್ಯ:** ಕೊಳಕು ನಾಲಿಗೆಯ ಪದರದ ಸೂಕ್ಷ್ಮಾಣುಜೀವಿಗಳಿಂದ ಅಲ್ಲಿನ ಕಸ, ವಸಡಿನ ಉರಿಯೂತ, ಸೋಂಕು, ವಸಡಿನ ಇಂಸರಿತಾ, ಮೂಳೆ ತೊಂದರೆ, ದಂತಕ್ಷಯ ಇವೆಲ್ಲವೂ ಸಂಭವಿಸಬಹುದು. ಜೊತೆ ನಾಲಿಗೆಯು ಸ್ವಚ್ಛವಾಗಿದ್ದಾಗ ಇದರ ಸಾಧ್ಯತೆ ತೀರಾ ಕಡಿಮೆ.

**ಸದೃಢ ದೇಹ:** ಬಾಯಿಯಲ್ಲಿರುವ ಸೂಕ್ಷ್ಮಾಣು ಜೀವಿಗಳು ಕಡಿಮೆ ಆಗುವುದರಿಂದ ನ್ಯೂಮೋನಿಯ, ಹೃದಯಾಘಾತ, ಪಾರ್ಶುವಾಯು, ಅವಧಿಗೆ ಮುನ್ನ ಹೆರಿಗೆ ಮೊದಲಾದ ಸಮಸ್ಯೆಗಳು ಕಡಿಮೆಯಾಗುತ್ತದೆ ಎಂದು ಸಂಶೋಧನೆಗಳು ತಿಳಿಸಿವೆ.

**ತೊಂದರೆ ಪತ್ತೆ:** ಹೇಗೆ ನಮ್ಮ ದೇಹದ ಬಹುಮುಖ್ಯ ಅಂಗವಾಗಿದ್ದು, ಅಂಗಗಳ ಆರೋಗ್ಯ ನಿಲ್ಲಿಸುವ ಕನ್ನಡಿಯಾಗಿದೆ. ಸ್ವಚ್ಛ ನಾಲಿಗೆ ಇದ್ದಾಗ ನೋಡಲು ಚಂದ ಮಾತ್ರವಲ್ಲ, ಏನಾದರೂ ತೊಂದರೆ ಇದ್ದಲ್ಲಿ ಪತ್ತೆ ಹಚ್ಚುವುದು ಸುಲಭ.

ಪುಟ್ಟದಾದರೂ ಪ್ರಬಲ ಮತ್ತು ಪ್ರಮುಖ ಅಂಗವಾದ ನಾಲಿಗೆಯನ್ನು ಸ್ವಚ್ಛವಾಗಿಡಬೇಕು.

**ಡಾ. ಕೆ.ಎಸ್. ಚೈತಾ**

## ಕತ್ತೆ ಏಕೆ ಮಾಂಸ ತಿನ್ನುವುದಿಲ್ಲ?



ಆರಂಭದಲ್ಲಿ ಎಲ್ಲಾ ಪ್ರಾಣಿಗಳು ಮಾಂಸ ಹಾರಿಗಳೇ ಆಗಿದ್ದವು. ಒಮ್ಮೆ ಒಂದು ಕಾಡಿನಲ್ಲಿ ಒಂದು ಸಿಂಹ, ಒಂದು ಕತ್ತೆ ಮತ್ತು ಒಂದು ನರಿ ಸ್ನೇಹಿತರಾಗಿ ಒಟ್ಟಿಗೆ ಇದ್ದವು. ವಯಸ್ಸಾಗುತ್ತಾ ಬಂದಂತೆ ಅವುಗಳಿಗೆ ಒಬ್ಬರೇ ಬೇಟೆಯಾಡಿ ಆಹಾರಗಳು ಗಳಿಸುವುದು ಕಷ್ಟವಾಯಿತು. 3 ಪ್ರಾಣಿಗಳು ಸಮಾಲೋಚಿಸಿ ಮೂವರು ಒಟ್ಟಿಗೆ ಸೇರಿ ಬೇಟೆಯಾಡುವುದು. ದೊರಕಿದ ಆಹಾರವನ್ನು ಮೂರು ಸಮಭಾಗಗಳಾಗಿ ಹಂಚಿಕೊಳ್ಳುವುದು ಎಂದು ತೀರ್ಮಾನಿಸಿದರು.

ಮೊದಲ ದಿನವೇ ಪ್ರಾಣಿಗಳು ಸೇರಿ ಒಂದು ದೊಡ್ಡ ಜಿಂಕೆಯನ್ನು ಭೇಟೆಯಾಡಿದವು. ಬೇಟೆಯಾದ ಮೇಲೆ ಸಿಂಹವು ಕತ್ತೆಯನ್ನು ಕುರಿತು ಈ ಜಿಂಕೆಯ ಮಾಂಸವನ್ನು ಮೂರು ಭಾಗ ಮಾಡುವ ಕೆಲಸ ನಿನ್ನದು ಎಂದಿತು. ತನಗೆ ಮೊದಲ ಆದ್ಯತೆ ಸಿಕ್ಕಿದ್ದಕ್ಕೆ ಕತ್ತೆಗೆ ತುಂಬಾ ಸಂತೋಷ ವಾಯಿತು. ತನ್ನ ಕೆಲಸವನ್ನು ನ್ಯಾಯಯುತವಾಗಿ ಮಾಡಬೇಕೆಂದು ನಿರ್ಧರಿಸಿ ಮಾಂಸವನ್ನು ಸರಿಯಾಗಿ 3 ಭಾಗಗಳು ಮಾಡಿತು. ನಂತರ ಸಿಂಹ ಮತ್ತು ನರಿಗಳನ್ನು ಕುರಿತು ನೋಡಿ ನೀವು ಹೇಳಿದಂತೆ ಸರಿಯಾಗಿ ಮೂರು ಭಾಗ ಮಾಡಿದ್ದೇನೆ. ಇವುಗಳನ್ನು ನೀವು ಆರಿಸಿಕೊಂಡು ಬಿಡಿ. ಉಳಿದ ಭಾಗವನ್ನು ನಾನು ತೆಗೆದುಕೊಳ್ಳುತ್ತೇನೆ ಎಂದು ತುಸು ಹೆಮ್ಮೆಯಿಂದಲೇ ನುಡಿಯಿತು.

ಕತ್ತೆ ತನ್ನ ಮಾತು ಮುಗಿಸಿತೋ ಇಲ್ಲವೋ ಅಷ್ಟರಲ್ಲಿ ಕತ್ತೆ ಮೇಲೆರಗಿದ ಸಿಂಹ ಅದನ್ನು ಕಾಲಿನಿಂದ ಪರಚಿ, ಹಲ್ಲಿನಿಂದ ಕಚ್ಚಿ ಹಿಂಸೆ ಮಾಡಿಬಿಟ್ಟಿತ್ತು. ಕತ್ತೆ ಅರೆಜೀವವಾಗಿ ಧೂಳಿನಲ್ಲಿ ಬಿದ್ದುಬಿಟ್ಟಿತು. ಆಗ ಸಿಂಹ ನರಿಯನ್ನು ಕುರಿತು ನರಿಯಣ್ಣ ಈ ಕತ್ತೆಗೆ ಸರಿಯಾಗಿ ಹಂಚಲು ಬರಲಿಲ್ಲ. ಈಗ ನೀನೇ ಆ ಕೆಲಸ ಮಾಡು ಎಂದಿತು. ತಕ್ಷಣ ಕಾರ್ಯಪ್ರವೃತ್ತವಾದ ನರಿ ಮಾಂಸದ ಮೂರು ಗುಡ್ಡಗಳನ್ನು ಒಟ್ಟು ಸೇರಿಸಿ ಅದರಲ್ಲಿ ಒಂದೇ ಒಂದು ಸಣ್ಣ ಚೂರನ್ನು ತೆಗೆದು ತನ್ನ ಮುಂದೆ ಇಟ್ಟುಕೊಂಡು ಉಳಿದುದೆಲ್ಲವನ್ನೂ ಸಿಂಹದ ಮುಂದೆ ಸರಿಸಿ ತನ್ನ ಕೆಲಸ ಮುಗಿಯಿತು ಎಂದಿತು. ಸಿಂಹಕ್ಕೆ ತುಂಬಾ ಸಂತೋಷವಾಯಿತು. ನರಿಯಣ್ಣ ನೀನು ತುಂಬಾ ಬುದ್ಧಿವಂತ. ಹಂಚಿಕೆ ಸರಿಯಾಗಿ ಮಾಡಿದ್ದೀಯಾ. ನಿನಗೆ ಕಲಿಸಿದ ಗುರು ಯಾರು ಎಂದು ಮುಂದಿದ್ದ ಮಾಂಸವನ್ನು ಕರಗಿಸತೊಡಗಿತ್ತು. ನರಿ ಮರುಕದಿಂದ ಕತ್ತೆ ಕಡೆ ನೋಡಿ ಈ ಕತ್ತೆಯಣ್ಣನೇ ನನ್ನ ಗುರು ಎಂದಿತು.

ಮೆಚ್ಚಿದೆ ನಿನ್ನ ಬುದ್ಧಿವಂತಿಕೆಗೆ. ನೀನು ಇನ್ನು ಮೇಲೆ ನನ್ನ ಮಂತ್ರಿಯಾಗಿರು ಎಂದು ನರಿಗೆ ಹೇಳಿ ಕತ್ತೆ ಕಡೆ ತಿರುಗಿ ಮರುಕದಿಂದ ಒಂದು ಚೂರು ಮಾಂಸವನ್ನು ಅದರ ಮುಂದೆ ಎಸೆದು ತಿನ್ನುವಂತೆ ಸೂಚಿಸಿತು. ಆಗ ಕತ್ತೆ ರಾಜನೆ ನಿಮಗೆ ಗೊತ್ತಿಲ್ಲ ಎನಿಸುತ್ತದೆ ಹೀಗೆ ಸ್ವಲ್ಪ ಹೊತ್ತಿನ ಮುಂಚೆಯಿಂದ ನಾನು ಮಾಂಸಾಹಾರವನ್ನು ತ್ಯಜಿಸಿ ಸಸ್ಯಾಹಾರದ ವ್ರತವನ್ನು ಕೈಗೊಂಡಿದ್ದೇನೆ. ಆದ್ದರಿಂದ ಈ ಮಾಂಸವು ನಿಮಗೆ ಅರ್ಪಿತವಾಗಲಿ ಎಂದು ನಮಸ್ಕರಿಸಿ ಹುಲ್ಲಿಗೆ ಬಾಯಿ ಹಾಕಿತು.

ಅಂದಿನಿಂದ ಸಿಂಹ ಕಾಡಿನ ರಾಜನಾಯಿತು. ನರಿ ಅದರ ಹಿಂಬಾಲಕನಾಗಿ ಸಿಂಹ ತಿಂದುಬಿಟ್ಟ ಮಾಂಸದ ಚೂರನ್ನು ತಿನ್ನುತ್ತ ಜೀವಿಸಲಾರಂಭಿಸಿತು. ಕತ್ತೆ ಇವೆರಡರಿಂದಲೂ ದೂರವಾಗಿ ತನ್ನ ಸಸ್ಯಹಾರದ ವ್ರತವನ್ನು ಪಾಲಿಸುತ್ತಾ ಬದುಕಿ ಕೊಂಡಿದೆ.

**ಡಾ. ಬಿ.ಆರ್. ಸತ್ಯನಾರಾಯಣ, ಬೆಂಗಳೂರು**

# ಕುರೂಪದಲ್ಲೂ ಸೌಂದರ್ಯ ಇದಕ್ಕೂ ಒಂದು ಸ್ಪರ್ಧೆ



ಹೌದು ಈ ವರ್ಷದ ನವಂಬರ್ ತಿಂಗಳ ಕೊನೆವಾರದಲ್ಲಿ ಅತಿ ಕುರೂಪಿ ಸ್ಪರ್ಧೆ ಜಿಂಬಾಂಬ್ವೆಯಲ್ಲಿ ನಡೆದಿದೆ. ಅಂತಿಮ ಹಂತದಲ್ಲಿ ದೇಶದ 35 ಸ್ಪರ್ಧಿಗಳು ಸ್ಪರ್ಧಿಸಿದ್ದಾರೆ. ಮೇಸನ್ ಸೆರೆ ಎಂಬಾತ $500 ನೊಂದಿಗೆ ಅತಿ ಕುರೂಪಿ ಎಂಬ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾನೆ.

42ರ ವಯಸ್ಸಿನ ಮೇಸನ್ ಸದ್ಯ ನಿರುದ್ಯೋಗಿ. ಎದುರಿನ ಎರಡು ಹಲ್ಲುಗಳನ್ನು ಕಳೆದುಕೊಂಡಿರುವ ಈತ ಬಾಯಿ ತೆರೆದರೆ ವಿಕಾರವಾಗಿ ಕಾಣುತ್ತಾನೆ. ನೆರೆಹೊರೆಯ ಮಕ್ಕಳಿಗೆ ನನ್ನ ರೂಪ ತೋರಿಸಿ ಭಯ ಪಡಿಸುತ್ತಿದ್ದೆ. ರೂಪವೆಂಬುದು ದೇವರು ಕೊಟ್ಟ ವರ. ಕುರೂಪದಲ್ಲಿ ಸೌಂದರ್ಯ ಹುಡುಕುವವರು ನಾವು. ಬದುಕನ್ನು ಧೈರ್ಯದಿಂದ ಎದುರಿಸುವ ಛಲ ನಮ್ಮಲ್ಲಿರಬೇಕು. ಈಗ ನನ್ನ ಮುಖಕ್ಕೆ ಪ್ರಶಸ್ತಿ ದೊರೆತಿರುವುದು ಸಂತಸ ನೀಡಿದೆ ಎಂದು ಆತ ಖುಷಿ ಹಂಚಿಕೊಂಡಿದ್ದಾನೆ. 2012ರಿಂದ ಈ ಸ್ಪರ್ಧೆ ಜಿಂಬಾಂಬ್ವೆಯಲ್ಲಿ ನಡೆಯುತ್ತಿದೆ.

**ಅವನಲ್ಲ ನಾನು ಕುರೂಪಿ:** ಆದರೆ ಈ ಬಾರಿಯ ಸ್ಪರ್ಧಾ ಕಣ ಅಕ್ಷರಸಹ ಗೊಂದಲದ ಗೂಡಾಗಿತ್ತು. ಫಲಿತಾಂಶ ಹೊರಬಿದ್ದಾಕ್ಷಣ ಎರಡನೆಯ ಸ್ಥಾನ ಪಡೆದಿದ್ದ ವಿಲಿಯಂ ಮಸ್ಲಿನ್ ತೀರ್ಪುಗಾರರ ಮೇಲೆ ಮುಗಿಬಿದ್ದ. ಮೇಸನ್ ಬಾಯಿ ತೆರೆದು ನಕ್ಕಾಗ ಮಾತ್ರ ಭಯ ಹುಟ್ಟಿಸುವಂತಿದ್ದಾನೆ. ತುಟಿ ಮುಚ್ಚಿದರೆ ಆತನ ವಿಕಾರ ಗೋಚರಿಸುವುದಿಲ್ಲ. ಹೀಗಾಗಿ ಆತನಿಗೆ ಕುರೂಪಿ ಪಟ್ಟ ಕೊಟ್ಟಿದ್ದು ತಪ್ಪು ಎಂಬುದು ಈತನ ವಾದ. ಮಾಸ್‌ವಿನು ಕಳೆದ ಕೆಲವು ವರ್ಷಗಳಿಂದಲೂ ಕುರೂಪಿ ಪಟ್ಟವನ್ನು ಇತರರಿಗೆ ಬಿಟ್ಟುಕೊಡದೆ ಕಾಯ್ದುಕೊಂಡು ಬಂದವನು.

ಮಾಸ್ತಿನೋ ಅಷ್ಟಕ್ಕೆ ಸುಮ್ಮನಾಗಲಿಲ್ಲ. ಎದುರಿನ ಎರಡು ಹಲ್ಲುಗಳನ್ನು ಕಳೆದುಕೊಂಡ ಮಾತ್ರಕ್ಕೆ ಆತ ಹೇಗೆ ಕುರೂಪಿ ಆಗುವನೆಂದು ಮಾಧ್ಯಮದವರನ್ನು ಪ್ರಶ್ನಿಸಿದ. ಆತನ ಅಭಿಮಾನಿಗಳ ತಂಡ ವೇದಿಕೆಯ ಎದುರು ಪ್ರತಿಭಟನೆ ನಡೆಸಿ ತೀರ್ಪುಗಾರರ ಮೇಲೆ ದಾಳಿ ನಡೆಸಲು ಸಜ್ಜಾಯಿತು. ಸಣ್ಣಪುಟ್ಟ ಪ್ರಮಾಣದ ಗಾಯಗಳನ್ನು ಹೊರತುಪಡಿಸಿದರೆ ಅಷ್ಟೇನೂ ತೊಂದರೆಯಾಗಲಿಲ್ಲ.

ಇತ್ತ ತೀರ್ಪುಗಾರರು ಫಲಿತಾಂಶವನ್ನು ಸಮರ್ಥಿಸಿಕೊಂಡರು. ಮೇಸನ್ ತನ್ನ ವಿರೂಪವನ್ನು ಪ್ರದರ್ಶಿಸಲು ಹೆಚ್ಚಿನ ಶ್ರಮ ವಹಿಸಿದ ಎಂಬುದು ಆತನ ಮುಖ ಭಾವದಲ್ಲಿ ವ್ಯಕ್ತವಾಗುತ್ತಿತ್ತು. ಆದರೆ ಮಾಸ್‌ವಿನು ಪ್ರಶಸ್ತಿ ನನಗೆ ಸಿಗುತ್ತದೆ ಎಂದು ಭಾವಿಸಿದ್ದ. ವೇದಿಕೆ ಮೇಲೆ ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲನಾದ ಎನ್ನುತ್ತಾ ತಮ್ಮ ತೀರ್ಪನ್ನು ಸಮರ್ಥಿಸಿ ಕೊಂಡರು.

**ಸ್ಪರ್ಧೆ ಹೀಗೆ ನಡೆಯುತ್ತದೆ**

ಅತಿ ಕುರೂಪಿ ಸ್ಪರ್ಧೆ ಹರಾರೆ ನೈಟ್ ಕ್ಲಬ್‌ನಲ್ಲಿ ಮೂರು ಹಂತದಲ್ಲಿ ನಡೆಯಿತು. ಮೊದಲಿಗೆ ಸ್ಪರ್ಧಿಯ ಮಾಡಲಿಂಗ್, ಆತ ಒಬ್ಬಂಟಿಯಾಗಿ ವೇದಿಕೆ ಮೇಲೆ ಭಿನ್ನ ಉಡುಪುಗಳಲ್ಲಿ ಕಾಣಿಸಿ ಕೊಳ್ಳಬೇಕು. ಎರಡನೇ ಸುತ್ತಿನಲ್ಲಿ ರೂಪದರ್ಶಿಗಳ ತಂಡದಲ್ಲಿ ತಾನು ಪಾಲ್ಗೊಂಡು ಇತರರಿಗಿಂತ ತಾನು ಹೇಗೆ ವಿಭಿನ್ನ ಎಂದು ತೋರಿಸಿಕೊಡಬೇಕು. ಕೊನೆಗೆ ಕೆಂಪು ಹಾಸಿನ ಮೇಲೆ ಕ್ಯಾಟ್ ವಾಕ್ (ಬೆಕ್ಕಿನ ನಡಿಗೆ) ಮಾಡಬೇಕು. ಮುಖದಲ್ಲೂ ವಿಭಿನ್ನ ಭಾವ ತೋರುವ ಮೂಲಕ ತಾನು ಕುರೂಪಿ ಎಂಬುದನ್ನು ತೋರಿಸಿಕೊಡಬೇಕು. ವಿಜಯಿ ಪಟ್ಟ ಹೊತ್ತ ಮೇಸನ್ ಕಳೆದ ನಾಲ್ಕು ತಿಂಗಳಿಂದ ಈ ಸ್ಪರ್ಧೆಗೆ ತಯಾರಿ ನಡೆಸಿದ್ದನಂತೆ.

ನಿರುದ್ಯೋಗ ಹೆಚ್ಚಾಗಿ ದೇಶವನ್ನಾಳುತ್ತಿರುವ ಹಿನ್ನೆಲೆಯಲ್ಲಿ ಅತಿ ಕುರೂಪಿ ಎಂಬ ಪಟ್ಟ ದೊರೆತರೆ 500 ಡಾಲರ್ ಮೊತ್ತ ಸಿಗುತ್ತದೆ ಎಂಬ ಕಾರಣಕ್ಕೆ ಸ್ಪರ್ಧೆಯಲ್ಲಿ ಭಾಗವಹಿಸುವವರು ಹೆಚ್ಚು. ಇವರಿಗೆ ನಾವು ವಿಶ್ವದ ಮುಂದೆ ಬೆತ್ತಲಾಗಿ ನಗೆಪಾಟಲಿಗೆ ಈಡಾಗುತ್ತಿದ್ದೇವೆ ಎಂಬ ಬೇಸರವಿಲ್ಲ. ಇದೊಂದು ದೇವರು ಕೊಟ್ಟ ವರ, ಜಗತ್ತಿಗೆ ಈ ರೀತಿಯಿಂದಾದರೂ ಪರಿಚಿತರಾಗುತ್ತಿದ್ದೇವೆ ಎಂಬ ಸಂತಸವಿದೆ. ಇಲ್ಲಿ ವಿಜಯಿಯಾದವರಿಗೆ ಜಾಹೀರಾತುಗಳಲ್ಲಿ ನಟಿಸುವ ಅವಕಾಶವೂ ದೊರೆಯುತ್ತಿದೆ. ಹೀಗಾಗಿ ಜಿಂಬಾಂಬ್ವೆಯಲ್ಲಿ ಇದು ಸ್ಪರ್ಧೆಗಿಂತ ಹೆಚ್ಚಾಗಿ ಹೊಟ್ಟೆಹೊರೆಯುವ ವೇದಿಕೆಯಾಗಿ ಬದಲಾಗುತ್ತಿದೆ.

**ಸವಿತಾ ಎನ್. ಹೊಳ್ಳ**

WISH YOU ALL OF THEM DECEMBER 2018 HAVE A VERY HAPPY BIRTHDAY. GOD BLESS YOU. ALL YOUR DREAMS TO BE FULLFILLED. HAVE A NICE DAY AND KEEP ALWAYS LAUGHING IN YOUR LIFE

| | |
|---|---|
| 1 Radha | Tumkur |
| 2 Ramya | Bangluru |
| 3 Mani | Hassan |
| 4 Suvarna | Mandya |
| 5 Srilatha | Shivamoga |
| 6 Ranjitha | Bangaluru |
| 7 Vani | Tumkur |
| 8 Mythili | Kolar |
| 9 Manjula | Hassan |
| 10 Shilpa | Mysuru |
| 11 Prema | Bidar |
| 12 Vidya | Mysuru |
| 13 Bindu | Mysuru |
| 14 Sarala | Mandya |
| 15 Salma A. Fahim | IAS Officer |
| 16 Sumarani | Kolar |
| 17 Manila | Ballary |
| 18 Akriti Sagar | IAS Officer |
| 19 M.S. Archana | IAS Officer |
| Sushama Godbele | IAS Officer |
| 20 Barathi | Bangaluru |
| 21 Sindhu | Poona |
| 22 Kanchana | Bangaluru |
| 23 Naghath Tabassum abroo | IAS Officer |
| 24 Vanitha | Mangaluru |
| 25 Amala | Mangaluru |
| 26 Sharavani | Ernakulam |
| 27 Latha | Coimbattur |
| 28 Parvathi | New Delhi |
| 29 Savitri | Mysuru |
| 30 Gouri | Hassan |
| 31. Chitra | Bangaluru |

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**1. ಸಂತೋಷ್, ರಾಯಚೂರು**
ಶೃಂಗಾರಕ್ಕಾಗಿ ಗಂಡಸರಿಗಿಂತ ಹೆಂಗಸರು ಹೆಚ್ಚು ಸಮಯ ತೆಗೆದುಕೊಳ್ಳುವುದೇಕೆ?
– ಸಮಯ, ರಸಮಯವಾಗಬೇಕಾದರೆ ರಮಣಿಯ ವಾಗಿರಬೇಕಲ್ಲ!

**2. ರಣಧೀರ, ಬೆಳಗಾಂ**
ಷಹಜಹಾನ್ ತನ್ನ ಪ್ರಿಯತಮೆಯ ನೆನಪಿಗಾಗಿ ತಾಜಮಹಲ್ ಕಟ್ಟಿಸಿದ. ಈಗಿನ ಹುಡುಗರು ಏನನ್ನು ಕಟ್ಟಿಸುವರು?
– ಫೋನ್ ಬಿಲ್, ಹೋಟೆಲ್ ಬಿಲ್ ಇತ್ಯಾದಿ ಕಟ್ಟಿಸುವರು.

**3. ಕೃಷ್ಣಮೂರ್ತಿ, ಬೆಂಗಳೂರು**
ಎರಡು ಮಕ್ಕಳ ತಾಯಿ ಆದ ಮೇಲೂ ಹೇಮ ಮಾಲಿನಿಯನ್ನು "ಕನ್ಯೆ" ಎನ್ನುವುದೇಕೆ?
– ಇನ್ನು ಅವರು ಕನ್ಯೆಯಾಗುವುದು ಕನಸೇ ಆಗುವುದರಿಂದ ಅವರನ್ನು ಕನಸಿನ ಕನ್ಯೆ ಎನ್ನುತ್ತಾರೆ.

**4. ಮಂಜುನಾಥ್, ತುಮಕೂರು**
ಸಾವಿಗೆ ನ್ಯಾಯವಿಲ್ಲ ಏಕೆ?
– ಮೇಲ್ಮನವಿ ಸಲ್ಲಿಸಲು ಮೇಲ್ಮನೆಗೆ ತಿಳಿದಿಲ್ಲವಾದ್ದರಿಂದ

**5. ಮಂಗಳ, ಬೆಳಗಾಂ**
ವರ್ಧಂತಿ ಮತ್ತು ಜಯಂತಿಗೆ ಇರುವ ಅಂತರವೇನು?
– ರಜೆ ಸಿಕ್ಕರೆ ಜಯಂತಿ, ಇಲ್ಲವಾದರೆ ವರ್ಧಂತಿ!

**6. ರಂಜಿತ, ಮಧುರೈ**
ಪ್ರೀತಿಗೂ, ಗರಗಸಕ್ಕೂ ವ್ಯತ್ಯಾಸವೇನು?
– ಪ್ರೀತಿಗೆ ಸೊಲ್ಲು ಮುಖ್ಯ. ಗರಗಸಕ್ಕೆ ಹಲ್ಲು ಮುಖ್ಯ

**7. ಸರೋಜ, ಊಟಿ**
ನಿಮ್ಮ ಉತ್ತರಗಳನ್ನೆಲ್ಲಾ ನೋಡಿದರೆ ನೀವು ಹೆಂಗಸರ ಪಕ್ಷಪಾತಿ ಎನಿಸುತ್ತೆ.?
– ವೆರಿಗುಡ್! ಅಂತಹ ಅಭಿಪ್ರಾಯವಾದಲ್ಲಿ ಹೋದ ಮನೆಗಳಲ್ಲಿ ಏನಾದರೂ ಹೊಟ್ಟೆಗೆ ಸಿಗುತ್ತದೆ ಬಿಡಿ.

**8. ಜಗನ್ಮೋಹಿನಿ, ಬೆಂಗಳೂರು**
ಮೋಡಕ್ಕೆ ಮೋಡ ಟಚ್ ಆದರೆ ಮಳೆ ಬರುತ್ತೆ. ಮನಸ್ಸಿಗೆ ಮನಸ್ಸು ಟಚ್ ಆದರೆ?
– ಸಂಬಂಧಕ್ಕೆ ಕಳೆ ಬರುತ್ತೆ ಅಷ್ಟೆ.

**9. ಗೋಪಾಲ್, ಮೈಸೂರು**
ಅತ್ತೆ ಸೊಸೆಯನ್ನು ಹೊಗಳುವುದು ಯಾವಾಗ?
– ಆದರ್ಶ ಅತ್ತೆಸೊಸೆ ಕಾರ್ಯಕ್ರಮದಲ್ಲಿ ಭಾಗವಹಿ ಸಲು ಕಳುಹಿಸಿ.

**10 ಲತಾ, ಶಿವಮೊಗ್ಗ**
ಸ್ವಂತಿಕೆ ಎಂದರೇನು?
– ಸ್ವಂತಿಕೆ ಹಾಳಾಗುವ ಅಂಜಿಕೆಗೆ ಇಷ್ಟವಾಗಿಸುವ ಭಾವ

**11 ಶ್ರೀಕಂಠ, ನಂಜನಗೂಡು**
ಇದುವರೆಗಿನ ರಾಜಕೀಯ ಇತಿಹಾಸದಲ್ಲಿ ಅಸಲಿ ಹೀರೋ ಎನಿಸಿಕೊಂಡಿರುವ ರಾಜಕಾರಣಿ ಯಾರು?
– ಸರ್ದಾರ್ ವಲ್ಲಬಾಯ್ ಪಟೇಲ್ ಎಲ್ಲಾ ಸಂಸ್ಥಾನ ಗಳನ್ನು ಕೂಡಿಸಿ ಭಾರತದ ಸರವನ್ನು ರೂಪಿಸಿದ ದಾರ ಅವರು!

**12 ರಾಜಪ್ಪ, ಮಂಡ್ಯ**
ಮದುವೆಗೂ ಚುನಾವಣೆಗೂ ಇರುವ ಸ್ವಾಮ್ಯವೇನು?
– ಎರಡೂ ಸಂದರ್ಭಗಳಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳು ಸದನದಲ್ಲಿ ಒಟ್ಟಾಗಿ ಕೂರುತ್ತವೆ.

# ಚಳಿಯಲ್ಲಿ ಒಂದು ಬೆಚ್ಚಗಿನ ಗುನುಗು



ಮೆಲ್ಲಗೆ ಬರಲೋ ಬೇಡವೋ ಅಂತ ಅನುಮಾನಿಸುತ್ತ ಅಡಿಯಿಟ್ಟ ಚಳಿ ಈಗ ಮೆಲ್ಲಮೆಲ್ಲನೇ ಆವರಿಸಿಕೊಂಡು ಇದೀಗ ತನ್ನದೇ ಪಾಳಿ ಎಂಬಂತೆ ಅಧಿಪತ್ಯ ವಹಿಸಿಕೊಳ್ಳುತ್ತದೆ. ಆದರೂ ಇದನ್ನು ಇದೇ ಚಳಿಗಾಲ ಎಂದು ಖಡಾಖಂಡಿತವಾಗಿ ಕಡ್ಡಿ ತುಂಡು ಮಾಡಿದಂತೆ ಹೇಳಲಾಗುವುದಿಲ್ಲ. ಯಾಕೆಂದರೆ ಎರಡು ದಿನ ಬೀಡುಬಿಟ್ಟ ಚಳಿ ಕಚಗುಳಿ ಇಡುತ್ತಿದ್ದಂತೆ ಎಲ್ಲಿಂದಲೋ ಯಾವುದೋ ಮಾಯದಲ್ಲಿ ಎಂಬಂತೆ ಉರಿಬಿಸಿಲು ವ್ಯಾಪಿಸಿ ಬಸವಳಿದು ಬೆವರು ಸುರಿಯಲು ತೊಡಗುತ್ತದೆ. ಅಷ್ಟು ಹೊತ್ತಿಗಾಗಲೇ ಗುಡುಗು, ಸಿಡಿಲು, ಶುರುವಾದ ಮಳೆಯ ಆರ್ಭಟವೂ ಈ ತಿಂಗಳಿಗೆ ಇಂತಹುದೇ ಕಾಲ ಅಂತ ವರ್ಗೀಕರಿಸಿ ಪರಿಗಣಿಸುವ ಕಾಲ ಯಾವತ್ತಿಗೂ ಮುಗಿದು ಹೋಗಿದೆ.

ಅದೇನೇ ಇರಲಿ ಈಗ ಮತ್ತೆ ತಂಪು ತಂಪು ಗಾಳಿ ಎಲ್ಲಿಂದಲೋ ನಮಗಾಗಿ ಎಂಬಂತೆ ಬೀಸತೊಡಗಿದೆ. ಸಂಜೆ ಮತ್ತು ಮುಂಜಾವುಗಳಲ್ಲಿ ಕೋರೈಸುವ ಚಳಿಯ ಪ್ರತಾಪ ಇರದಿದ್ದರೂ, ಮೈಕೈಗಳನ್ನು ತಂಪಾಗಿಸಿ ಕೊಂಚ ಅಲುಗಾಡಿಸಿ ಬಿಡುವುದಂತೂ ಹೌದು. ಕತ್ತಲಾಗುವ ಅಷ್ಟು ಹೊತ್ತು ತಾಳ್ಮೆಯೇ ಇಲ್ಲವೆಂಬಂತೆ, ಸಂಜೆಯಾಗುತ್ತಲೇ ಇನ್ನು ಪುರುಸೊತ್ತೇ ಇಲ್ಲ ಎಂಬಂತೆ ಆವರಿಸಿ ಬಿಡುವ ಇರುಳು, ಹೊತ್ತು ಏರುತ್ತಿದ್ದರೂ ಏಳಲು ಮನಸಾಗದೆ ಮೈಯೆಲ್ಲಾ ಹಿಡಿಯಾಗಿ ಹುದುಗಿಸಿಕೊಂಡು ಎಚ್ಚೆತ್ತುಕೊಳ್ಳಲು ಬಿಡದಂತೆ ಕಾಟ ಕೊಡುವ ಈ ಚಳಿ ದಿನದ ಕೆಲಸಗಳನ್ನೆಲ್ಲ ಹೇಗೆ ಏರುಪೇರು ಮಾಡಿ ಬಿಡುತ್ತದಲ್ಲ. ಸುಮ್ಮಗೆ ಎಂಬಂತೆ ಮನಸ್ಸಿನೊಳಗೆ ಶಪಿಸಿಕೊಂಡು ಮತ್ತಷ್ಟು ಒದ್ದುಕೊಂಡು ಕನಸು ಕಾಣುತ್ತೇವೆ.

ಬೆಳಗ್ಗೆ ಎದ್ದೊಡನೆ ಬಿಸಿಬಿಸಿ ಕಾಫಿ ಹೀರುತ್ತಾ ಚಳಿ ಕಾಯಿಸುವ ಅಂತ ಮನಸ್ಸಾದರೂ ಹೆಚ್ಚಿನ ಮನೆಗಳಲ್ಲಿ ಸೌದೆ ಒಲೆ ಗಳಿಲ್ಲ. ಅಡುಗೆ ಮಾಡಲು ಸೌದೆ ಒಲೆ ಇದ್ದರಂತೂ ಮುಗಿಯಿತು. ಎದ್ದು ಮುಖ ತೊಳೆದಾದ ಮೇಲೂ ಒಲೆಯ ಬುಡದಲ್ಲಿ ಸಣ್ಣಗೆ ಉರಿಯುವ ಬೆಂಕಿ ಮುಂದೆ ಚಳಿ ಕಾಯಿಸುತ್ತಾ ಕುಳಿತುಕೊಳ್ಳುವುದಕ್ಕಿಂತ ಪರಮಸುಖ ಮತ್ತೊಂದಿಲ್ಲ ಅನ್ನುವಷ್ಟರ ಮಟ್ಟಿಗೆ ಹಿತವೆನಿಸುತ್ತದೆ. ಈಗ ಒಲೆ ಇಲ್ಲದೆ, ಗುರಿಯೇ ಕಾಣದೆ ಯಾವುದೋ ಮಂತ್ರ ಸಿದ್ಧಿ, ದಕ್ಕಿದ ವರದ ಹಾಗೆ ಕ್ಷಣಾರ್ಧದಲ್ಲಿ ಅಡುಗೆ ಮಾಡುವಾಗ, ಎಳವೆಯಲ್ಲಿ ನಾವುಗಳು ಈ ಒಲೆಯ ಬುಡಕ್ಕಾಗಿ ಎಷ್ಟೊಂದು ಕಾದಾಟ ಮಾಡುತ್ತಿದ್ದೆವಲ್ಲ ಅಂತ ಅಂದುಕೊಂಡರೆ ಈಗ ನಗು ಬರುತ್ತದೆ. ಅದೊಂದು ವಿಷಾದದ ಸುಯಿಲು.

ಆ ಚಳಿಗೆ ಇರುವುದು, ಊಟ ಮಾಡುವುದು, ಓದಿದಂತೆ ನಟಿಸುತ್ತಾ ಸಣ್ಣಗೆ ತೂಕಡಿಸುವುದು, ಎಲ್ಲವೂ ಒಲೆಯ ಬುಡದಲ್ಲಿ. ಅದು ಕದ್ದುಮುಚ್ಚಿ. ಹಾಗಾಗಿ ದೊಡ್ಡವರ ಕಣ್ಣುತಪ್ಪಿಸಿ, ಒಕ್ಕಲು ಕೆಲಸಗಳು, ಅಂದರೆ ಭತ್ತದ ಕಟಾವು, ರವಾನೆ, ಸಂಗ್ರಹಣೆ ಹೀಗೆ ಹೊಲದ ಕೆಲಸಗಳು ಕೂಡ ಶುರುವಾಗುವುದು. ಈ ಗದಗಟ್ಟುವ ಚಳಿಗೆ, ಗದ್ದೆಯಿಂದ ಬತ್ತದ ಹೊರೆ ಹೊತ್ತು ತಂದು, ಭತ್ತ ಬಡಿದು ರಾಶಿ ಮಾಡುವವರೆಗೆ ಮಕ್ಕಳಿಗೂ ಕೂಡ ಬಿಡುವಿಲ್ಲದಷ್ಟು ಕೆಲಸ. ಆಗ ನಿಜಕ್ಕೂ ಚಳಿ ಹತ್ತಿರ ಕೂಡ ಸುಳಿಯುವುದಿಲ್ಲ. ಆ ರಾತ್ರಿ ಇಡೀ ಮನೆ ಮಂದಿಗೆಲ್ಲಾ ಹುಲ್ಲನ್ನ ಇಡುವ ಕೆಲಸ. ಅದಕ್ಕೆ ನಮ್ಮೂರ ಕಡೆ ಹುಲ್ಲು ಮುಂಡ ಅಂತ ಕರೆಯುವುದು ರೂಢಿ.

ಸಮಯದಲ್ಲಿ ಓದಿಕೊಳ್ಳಿ ಅಂತ ನಮ್ಮನ್ನ ಮನೆ ಒಳಗೆ ಕುಳ್ಳಿರಿಸಿ ಬಂದರೆ, ನಾವುಗಳು ಕುಳಿತಲ್ಲೇ ಕುಳಿತುಕೊಳ್ಳಲು ಆಗದೆ ಏನೋ ಕಳಕೊಂಡವರ ತರಹ ಚಡಪಡಿಸುತ್ತಾ ಕೊಲೆ, ದೆವ್ವ, ಭೂತ ಹೀಗೆ ಹೆದರಿ ನಾನಾ ಅರ್ಥಗಳನ್ನು ಮನೆಯಿಂದ ಮೆಲ್ಲಗೆ ಹೇಳಿಕೊಳ್ಳುತ್ತಾ ಕಾಲಕ್ಕೆ ಬಂದು ಸಾಮ್ರಾಜ್ಯ ಸ್ಥಾಪಿಸಿ ಬಿಡುತ್ತಿದ್ದೆವು. ಹಿರಿಯರೆಲ್ಲ ಅವರದೇ ತರಾತುರಿಯಲ್ಲಿ ಇರುವಾಗ ನಾವು ಮನೆಯ ಎಲ್ಲಾ ಒಬ್ಬೊಬ್ಬರು ಒಂದೊಂದು ಕಡೆ ಸುತ್ತ ಹುಲ್ಲಿನ ಮೆದೆಯನ್ನು ಮನೆಯಂತೆ ಮಾಡಿಕೊಂಡು ಓದು–ಬರಹ ಅವನ್ನೆಲ್ಲ ನಾಳೆಗೆ ಎಂಬಂತೆ ಜೋಪಾನವಾಗಿ ಚೀಲದೊಳಗಿಟ್ಟು

ಆ ಹುಲ್ಲಿನ ಮೆದೆಯೊಳಗೆ ನಿದ್ದೆ ಹೋಗಿ ಬಿಡುತ್ತಿದ್ದವು. ಸುಖ ಎಂದರೆ ಇದೆ ಎಂದು ಅಸೂಯೆ ಪಟ್ಟುಕೊಳ್ಳುವ ಹಾಗೆ. ಅಂತ ಒಂದು ಗಳಿಗೆಯನ್ನೂ ಮೆಲುಕು ಹಾಕುವುದು ಇವತ್ತಿನ ಶಿಕ್ಷಣದ ಸುಖದ ಹಾಗೆ ಗೋಚರಿಸುತ್ತದೆ. ಆದರೆ ಮುಗಿದ ಬಳಿಕ ನಮ್ಮನ್ನು ಎಬ್ಬಿಸಿಕೊಂಡು ಹೋಗಿ ಬಚ್ಚಲು ಮನೆಯಲ್ಲಿ ನಿಲ್ಲಿಸಿದಾಗ ಮಾತ್ರ ಪಡುವ ಪಡಿಪಾಟಲು ಯಾರಿಗೆ ತಾನೇ ಬೇಕು. ಮೈಯಿಗೆ ಬಿಸಿ ನೀರು ಹಾಕಿದ್ದೆ ತಡ ಹುಲ್ಲು ಮುಟ್ಟಿದ ಕಾರಣ ಮೈಯೆಲ್ಲಾ ತೋರಿಸೋಕೆ ಶುರುವಾಗಿ ಆಗ ಮಾತ್ರ ನಿಂತಲ್ಲೇ ದೆವ್ವ–ದೇವರುಗಳ ದರ್ಶನವಾದಂತಾಗಿ ನರ್ತನ ಶುರುವಾಗಿಬಿಡುತ್ತದೆ. ತುರಿಸತೊಡಗಿದಾಗ ಮಾತ್ರ ಸುಳಿಯುವುದೇ ಇಲ್ಲ. ಮನೆಯಲ್ಲೇ ಓದುತ್ತಾ ಕುಳಿತುಕೊಳೋಣ. ಅಲ್ಲಿಗೆ ಹೋಗೋದು ಬಿಡಬೇಕೆಂದು ಸುಮ್ಮನೆ ಒಂದು ಸುಳ್ಳು ಸುಳ್ಳೇ ನಿರ್ಧಾರಕ್ಕೆ ಬಂದು ಬಿಟ್ಟಿರುತ್ತವೆ. ಅದು ಆ ಕ್ಷಣದ ತೀರ್ಮಾನ ಅಷ್ಟೇ. ಮತ್ತೆ ಎಂದಿ ನಂತೆ ಯಥಾಪ್ರಕಾರ ಮನಸ್ಸು ಬಣ್ಣ ಬದಲಾಯಿಸುವ ಗೋಸುಂಬೆ. ಏನೇ ಆದರೂ ಬಿಳಿಯ ಮಂಜಿನ ಹೊದಿಕೆಯನ್ನು ಒದ್ದುಕೊಂಡು ಮಲಗಿದಂತೆ ಭಾಸವಾಗುತ್ತದೆ. ನೀರನ್ನು ಮುಟ್ಟುವುದು ಹೋಗಲಿ, ದೂರದಿಂದ ನೋಡುವಾಗಲೇ ನಡುಕ ಶುರುವಾಗು ತ್ತದೆ. ತಂಪು ತಂಪು ಮಂಜುಗಡ್ಡೆ ಅಂತಹ ನೀರಿನಲ್ಲಿ ಹೊತ್ತಾರೆ ಮುಳುಗು ಹಾಕಿ ಅಯ್ಯಪ್ಪಸ್ವಾಮಿಯ ಭಕ್ತರು ಧ್ಯಾನಿಸುತ್ತಾ ಸ್ವಾಮಿಯೇ ಶರಣಂ ಅಯ್ಯಪ್ಪ ಎಂದು ಹೋಗಿ ದೇವರನ್ನು ಕರೆಯುವಾಗ ಅವರ ಬಗ್ಗೆ ಮತ್ತಷ್ಟು ಭಯಭಕ್ತಿ ಉಂಟಾಗಿ ವಸ್ತ್ರಧಾರಿಗಳನ್ನು ನೋಡುವಾಗ ಅವರೇ ದೇವರ ತದ್ರೂಪ ಅನ್ನುವಷ್ಟರ ಮಟ್ಟಿಗೆ ನಮ್ಮ ಮನಸ್ಸು ಆಗಿಬಿಡುತ್ತಿತ್ತು.

ಇನ್ನೂ ಶಾಲೆ ಬಿಟ್ಟು ಮನೆಗೆ ಬರುವ ಸಂಜೆ ಹೊತ್ತಿನಲ್ಲಿ ನಮಗಾಗಿಯೇ ಹಾರುತಿದೆಯೇನೋ ಎಂಬಂತೆ ಬಯಲ ತುಂಬ ಝೇಂಕರಿಸುತ್ತ ದುಂಬಿಗಳು ಎಲ್ಲಾ ಮುತ್ತಿಡುವಷ್ಟು ಪಕ್ಕಕ್ಕೆ ಬಂದು ಹಾರಾಡುತ್ತಿದ್ದವು. ಕೈಗೆ ಸಿಕ್ಕ ಸಿಕ್ಕ ದುಂಬಿಗಳನ್ನೆಲ್ಲ ಬಾಲದ ತುದಿಗೆ ದಾರ ಕಟ್ಟಿ ಹಾರಿಸುವಾಗ ಸಿಕ್ಕಾಪಟ್ಟೆ ಮಜವಾಗುತ್ತಿತ್ತು. ಈಗ ನೆನೆಸಿಕೊಂಡಾಗಲೆಲ್ಲ ಅಯ್ಯೋ ಅನ್ನಿಸಿಬಿಡುತ್ತದೆ. ಆ ಬದಿಯ ಮರ ತನ್ನದು ಈ ಮರ ನಿನ್ನದು ಎಂದುಕೊಂಡು ಕೂಡುವಂತೆ ಗಿಳಿ, ಚೋರೆ ಹಕ್ಕಿಗಳು ಈಗ ಎಲ್ಲಿಗೆ ಹೋಗಿರುವ ವೆಂದು ಯಾರಿಗೂ ಸುಳಿವಿಲ್ಲ. ಪಚ್ಚೆ, ತಾಯಿಲ್ಲದ ಇಲ್ಲದ ಗದ್ದೆ ತುಂಬಾ ಕೃಷಿ ಮೇಳೈಸಿ ಇದ್ಯಾವುದಕ್ಕೂ ನಮಗೂ ಸಂಬಂಧವೇ ಇಲ್ಲ ಎನ್ನುವಷ್ಟರಮಟ್ಟಿಗೆ ನಿರ್ಲಿಪ್ತವಾಗಿ ನೋಡುತ್ತಿದೆ. ಹೊಳೆಯ ದಂಡೆಯ ಬದಿಯ ಎರಡು ಮರಗಳು ಮಾತ್ರ ಮೂಕವಾಗಿ ಹಕ್ಕಿಗಳ ಕಲರವ ಕೇಳಲಿಕ್ಕಾಗಿಯೇ ಕಾಯುತಿರುವೆಯೋ ಎಂಬಂತೆ ಚಿಗುರು ಕದ್ದುಕೊಂಡು, ರೆಂಬೆ ಕೊಂಬೆಗಳನ್ನು ಗಲಗಲ ಬೀಸಿಕೊಂಡು ಜೀವಂತವಾಗಿದೆ.

ಈ ಹೊತ್ತಲ್ಲಿ ತಣ್ಣನೆ ಗಾಳಿ ಮೆಲ್ಲಗೆ ಬೀಸುತ್ತ ಚಳಿಗಾಲ ಬಂದದ್ದಕ್ಕೆ ಸಾಕ್ಷಿ ಹೇಳುತ್ತಿದೆ. ಒಂದೆರಡು ದುಂಬಿಗಳು ಏನನ್ನೋ ಹುಡುಕುತ್ತಾ ಅಂಗಳದ ತುಂಬೆಲ್ಲ ಸದ್ದಿಲ್ಲದೆ ಹಾರಾಡುತ್ತಿವೆ. ಮನಸ್ಸು ತುಂಬಿ ಬಂದು ದುಂಬಿ ಜೊತೆಗೆ ಹಾರುತ್ತಿದೆ. ಗದ್ದೆ, ಬಯಲು, ನದಿ, ಹುಲ್ಲಿನ ಮೆದೆ, ಹಕ್ಕಿ ಕುಳಿತ ಮರದ ಸುತ್ತ ಗಿರಕಿ ಹೊಡೆಯುತ್ತಿದೆ. ತಣ್ಣಗೆ ಗಾಳಿ ಚಳಿ ಕಾಲಿಗೆ ಅಡ್ಡಾಡುತ್ತಿದ್ದರು ಮನಸ್ಸು ಮಾತ್ರ ಹಿತವಾಗಿ ಗುನುಗುತ್ತಿದೆ. ನೆನಪುಗಳಿಗೆ ಉಯ್ಯಾಲೆ ಕಟ್ಟಿ ಚಳಿಗೊಂದು ಬೆಚ್ಚನೆಯ ಥ್ಯಾಂಕ್ಸ್ ಕಂಬಳಿ ಒಳಗಿನಿಂದ.

## ಶುಭಾಶಯಗಳು



ಶ್ರೀಮತಿ ಪುಷ್ಪಲತಾ ಜಗನಾಥ್
ಮೇಯರ್,
ಮೈಸೂರು ಮಹಾನಗರಪಾಲಿಕೆ



ಡಾ. ಪುಷ್ಪ ಅಮರನಾಥ್
ಅಧ್ಯಕ್ಷರು
ಕೆಪಿಸಿಸಿ ಮಹಿಳಾ ಘಟಕ

## ಧೈರ್ಯದಿಂದಿರಿ



ಅಂಬಿಯವರ ಆಸೆ, ಆಕಾಂಕ್ಷೆಗಳು ನಿಮಗೆ ಮಾತ್ರ ಗೊತ್ತು. ಯಾವುದೇ ಕಾರಣಕ್ಕೂ ಈಗ ನೀವು ತೆಗೆದುಕೊಳ್ಳುವ ನಿರ್ಧಾರಕ್ಕೆ ಕರ್ನಾಟಕದ ಜನ ನಿಮ್ಮೊಂದಿಗಿದ್ದಾರೆ. ಧೈರ್ಯದಿಂದ ಮುನ್ನುಗ್ಗಿ ಎಲ್ಲಾ ಶಕ್ತಿಯನ್ನು ಚಾಮುಂಡೇಶ್ವರಿ ದೇವಿ ನಿಮಗೆ ನೀಡಲಿ ಎಂದು ಮ.ವಿ. ಬಳಗ ಪ್ರಾರ್ಥಿಸಿದೆ.

RNI No. KARKAN/2015/71642 KA/SK/MYS/109/2017-2019

ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ನಾಡಿನ ಜನತೆಗೆ,
ನಮ್ಮ ಹಿತೈಷಿಗಳಿಗೆ ಹಾಗೂ ಗ್ರಾಹಕರೆಲ್ಲರಿಗೂ ಶುಭಾಶಯಗಳು

SHRIRAM
Financial Products Solutions Pvt. Ltd.,
YOUR PARTNER FOR PROSPERITY
IN PARTNER SHIP WITH Sanlam Group

ಸೇಲ್ಸ್ ಆಫೀಸರ್ಸ್ ಬೇಕಾಗಿದ್ದಾರೆ

ಪಾರ್ಟ್ ಟೈಂ ಅಥವಾ ಫುಲ್ ಟೈಂ ಕೆಲಸ

ಸಂಪರ್ಕಿಸಿ: **9243584444/7829011628**

## ಕೆಲಸ ಖಾಲಿ ಇದೆ– ಕೆಲಸ ಮಾಡುವವರಿಲ್ಲ



ಮೈಸೂರು ಹಾಗೂ ಬೆಂಗಳೂರಿನಲ್ಲಿ ನೂರಾರು, ಸಾವಿರಾರು, ಲಕ್ಷಾಂತರ ನಿರುದ್ಯೋಗಿಗಳಿಗೆ ಹಾಗೂ ಕೆಲಸ ಮಾಡಬೇಕು ಎಂಬ ಇಚ್ಛೆಯುಳ್ಳವರಿಗೆ ಕೆಲಸ ಖಾಲಿ ಇದೆ. ಸಂಬಳ ಎಷ್ಟು ಬೇಕೆಂದು ನೀವೇ ನಿರ್ಧರಿಸಿ. ನಾವು ಕೆಲಸ ಕೊಡಲು ರೆಡಿ. ನೀವು ಕೆಲಸ ಮಾಡಲು ರೆಡಿನಾ? ಸಂದರ್ಶನಕ್ಕೆ ಬಂದವರನ್ನು ಕೆಲಸವಿಲ್ಲವೆಂದು ವಾಪಸ್ ಕಳುಹಿಸುವುದಿಲ್ಲ. ಕೆಲಸ ಮಾಡಲು ಇಷ್ಟವಿದ್ದಲ್ಲಿ ಸಂದರ್ಶನಕ್ಕೆ ಮಾತ್ರ ಸಂಪರ್ಕಿಸಿ

**9243584444/7829011628**

Book Post

To

From
Mahila Vishesha
No. 10, City Bus Stand Building
2nd Floor, K.R. Circle
Mysuru - 570001

Edited, Published and Owned by H.V.Venkatasubbarao, No.1021, 14th Cross, 2nd Stage, Hebbal, Mysore- 570017 and Printed by B.S.Meera and Printed at Annapuoorna Offset Printers, No.511, 14th Main, Saraswathipuram, Mysore-570009
Published at No.1021, 14th Cross, 2nd Stage, Hebbal, Mysore-570017. Email:mahilavishesha15@gmail.com Web:www.mahilavishesha.in Editor:H.V.Venkatasubbarao Mob: 8880334444 / 9243584444 RNI No:KARKAN/2015/71642